

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119



Volume : 06 Issue : 301 Saturday 20-04-2024 E-mail : maruti.b.hosamani76@gmail.com Page: 4 Price : Rs. 1/-


## ಬಳ್ಳಾರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಈ. ತುಕಾರಾಮ್ ಗೆಲುವು ಶತಸಿದ್ಧ: ಸಂತೋಷ್ ಎಸ್ ಲಾಡ್



**ಕಾನಾ ಹೊಸಹಳ್ಳಿ :** ಈ ದೇಶದ ಸಂವಿಧಾನ ಉಳಿವಿಗಾಗಿ ನಾವೆಲ್ಲರೂ ಹೋರಾಟ ಮಾಡಬೇಕು ದೇಶದಲ್ಲಿ 10 ವರ್ಷ ದಿಂದ ಸರ್ವಾಧಿಕಾರಿ ಧೋರಣೆ ನಡೆಯುತ್ತಿದೆ ಎಂದು ಸಚಿವ ಸಂತೋಷ್ ಲಾಡ್ ಕರೆ ನೀಡಿದರು. ಪಟ್ಟಣದ ಶ್ರೀ ಮಾರಿಕಾಂಬಿಕಾ ದೇವಿಯ ದ್ವಾರ ಬಾಗಿಲು ಮುಂಭಾಗದಲ್ಲಿ ಹಮ್ಮಿಕೊಂಡ ಬಳ್ಳಾರಿ ಲೋಕಸಭಾ ಚುನಾವಣೆ ಅಭ್ಯರ್ಥಿ ಈ ತುಕಾರಾಮ್ ಅವರ ಬಹಿರಂಗ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದರು. 2014 ರ ಮೊದಲು ಬಿಜೆಪಿ ಸರ್ಕಾರ ಆಡಳಿತಕ್ಕೆ ಬರುವ ಮುಂಚೆ ಸ್ವಿಸ್.

ಹೇಳಿದ್ದ ಬಿಜೆಪಿ ಈ ವರೆಗೂ ಈಡೇರಿಸಿಲ್ಲ. ಅಧಿಕಾರಕ್ಕೆ ಬಂದ ನಂತರ ಪ್ರತಿ ವಸ್ತುಗಳ ಬೆಲೆ ಏರಿಕೆಯಾಗಿ ಬಡವರು, ಕೂಲಿ ಕಾರ್ಮಿಕರು ಬದುಕುವುದು ಕಷ್ಟವಾಗಿದೆ. 2016 ರಲ್ಲಿ ನರೇಂದ್ರ ಮೋದಿ ಅವರು ಕಪ್ಪು ಹಣ ವೈಟ್ ಮಾಡುತ್ತೇನೆ ಎಂದು ರಾತ್ರೋರಾತ್ರಿ ನೋಟು ಬ್ಯಾನ್ ಮಾಡಿದಾಗ ಬಡವರು, ರೈತರು ಬ್ಯಾಂಕ್ ಮುಂದೆ ಸಾಲುಗಟ್ಟಿ ನಿಂತು ನೋಟು ಬದಲಾವಣೆ ಮಾಡುವಾಗ ಎಷ್ಟು ಜನರು ಪ್ರಾಣ ಕಳೆದು ಕೊಂಡರು. ಪೆಟ್ರೋಲ್, ಡಿಸೇಲ್ ರೇಟ್ ಕಡಿಮೆ ಆಗಿದೆಯಾ.? ಚುನಾವಣೆ ಬಂದಾಗ ಒಂದು ಅಜೆಂಡಾ ಸೆಟ್ ಮಾಡ್ತಾರೆ. ಅಧಿಕಾರ ಇದೆ ಎಂದು ದುರುಪಯೋಗ ಮಾಡಬಾರದು. ರಾಜ್ಯ ಸರ್ಕಾರ 5 ಗ್ಯಾರಂಟಿ ಯೋಜನೆ ಅನುಷ್ಠಾನ ಗೊಳಿಸಿ ನುಡಿದಂತೆ ನಡೆದಿದ್ದು ಕಾಂಗ್ರೆಸ್ ಸರ್ಕಾರ ಬೆಂಬಲಿಸಿ ಎಂದು ಮತದಾರರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಡಾ ಎನ್ ಟಿ ಶ್ರೀನಿವಾಸ್ ಮಾತನಾಡಿ ಲೋಕಸಭೆಗೆ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಈ ತುಕಾರಾಮ್ ಅವರು ಗೆಲ್ಲುವುದು ನಿಶ್ಚಿತ, ಇದರಲ್ಲಿ ಯಾವ ಸಂಶಯವೂ ಇಲ್ಲ. ಇವರ ಬೆನ್ನಿಗೆ ನಮ್ಮ ಗ್ಯಾರಂಟಿಗಳ ಅಭಯವಿದೆ. ರಾಜ್ಯ ಸರಕಾರದ ಜನಪರ ಆಡಳಿತದ ಬೆಂಬಲವಿದೆ. ಚುನಾವಣೆಯಲ್ಲಿ ಧೈರ್ಯವಾಗಿ ಮತ ಕೇಳುವ ನೈತಿಕ ಹಕ್ಕು ನಮಗಿದೆ. ಪಕ್ಷದ ಎಲ್ಲರೂ ಸಂಘಟಿತರಾಗಿ, ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಲಿದ್ದೇವೆ. ಬಹು ವರ್ಷಗಳ ನಂತರ ಕಾಂಗ್ರೆಸ್ ಪಕ್ಷ ಲೋಕಸಭೆಯಲ್ಲಿ ಗೆಲ್ಲುವ ಕಾಲ ಕೂಡಿ ಬಂದಿದೆ ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ತುಕರಾಮ್ ಮಾತನಾಡಿ ಬಿಜೆಪಿಯವರು ಮತದಾರರಿಗೆ ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದಿದ್ದಾರೆ. ಕಳೆದ 70 ವರ್ಷಗಳಲ್ಲಿ ಕಾಂಗ್ರೇಸ್ ಏನು ಮಾಡಿದೆ ಎಂದು ಕೇಳುತ್ತಿದ್ದಾರೆ. ನೀರು, ಸೂರು, ವಿದ್ಯುತ್, ರಸ್ತೆಗಳನ್ನು, ಉದ್ಯೋಗ, ಶಾಲಾ–ಕಾಲೇಜುಗ ನೀಡಿದ್ದೇ ಕಾಂಗ್ರೆಸ್ ಎನ್ನುವುದನ್ನು ಯಾರೂ ಮರೆತಿಲ್ಲ. ಆದರೆ, 10 ವರ್ಷದಲ್ಲಿ ಬಿಜೆಪಿ ಏನು ಮಾಡಿದೆ' ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

ಈ ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಭೀಮ ನಾಯ್ಕ್. ಎನ್ಟಿ ತಮ್ಮಣ್ಣ, ಶಶಿಧರ್ ಸ್ವಾಮಿ, ಎಸ್ ವೆಂಕಟೇಶ್, ನಾಗಮಣಿ ಜಿಂಕಲ್, ಹೊಸಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಕುಮಾರ್ ಗೌಡ್ರು, ಗುಂಡುಮುಣುಗು ತಿಪ್ಪೇಸ್ವಾಮಿ, ಎಸಿ ಚೆನ್ನಬಸಪ್ಪ. ಏನ್ ದುಗ್ಗಪ್ಪ. ಉಮೇಶ್, ನೂರು ಅಹ್ಮದ್, ಕಾವಲಿ ಶಿವಪ್ಪ ನಾಯಕ, ಜಿ ಓಬಣ್ಣ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ವೈಯಂ ವೀರೇಶ್ವರಯ್ಯ. ಗುಂಡುಮುಣುಗು ಮಂಜುನಾಥ, ಗ್ರಾ.ಪಂ ಅಧ್ಯಕ್ಷ ಎಸಿ ಚೇತನ್, ಯುವ ಮುಖಂಡ ಸೂರ್ಯಪ್ರಕಾಶ್. ಪಿ ಎಲ್ ಬ್ಯಾಂಕಿನ ಮಾಜಿ ಅಧ್ಯಕ್ಷ ಸತೀಶ್ ಎಚ್ ಬಿ. ಎಳೆನೀರು ಗಂಗಣ್ಣ, ಬಿಟಿ ಗುದ್ದಿ ದುರುಗೇಶ್, ನಾಗೇಶ್, ಮನೋಜ್ ಕುಮಾರ್, ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಮುಖಂಡರು, ಮಹಿಳೆಯರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್. ವಿರೇಶ್ ಕಾನಾ ಹೊಸಹಳ್ಳಿ**

## ಹಿರಿಯ ನಾಗರಿಕರು, ವಿಶೇಷ ಚೇತನರಿಂದ ಮತದಾನ ಜಾಗೃತಿ



**ಹುನಗುಂದ :** ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಾ ಪಂಚಾಯತಿ ಆವರಣದಲ್ಲಿ ಹಿರಿಯ ನಾಗರಿಕರು ಹಾಗೂ ವಿಶೇಷ ಚೇತನರ ಮತದಾನ ಜಾಗೃತಿ ಜಾಥಾಗೆ ಮಾನ್ಯ ಕಾರ್ಯ ನಿರ್ವಾಹಕ ಅಧಿಕಾರಿ ತಾರಾ ಎನ್ ಹಾಗೂ ಇಳಕಲ್ಲ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ಮುರಳಿಧರ ದೇಶಪಾಂಡೆ ಅವರು ಚಾಲನೆ ನೀಡಿದರು.

ಈ ಜಾಥಾವೂ ತಾಲೂಕಾ ಪಂಚಾಯತಿ ಕಚೇರಿಯಿಂದ ನಗರದ ಸರ್ಕಲ್ ವರೆಗೂ ನಡೆಯಿತು. ಬಳಿಕ ಇಳಕಲ್ಲ ಹಾಗೂ ಹುನಗುಂದ ತಾಲೂಕಿನ ಕಾರ್ಯ ನಿರ್ವಾಹಕ ಅಧಿಕಾರಿ ತಾರಾ ಎನ್ ಹಾಗೂ ಮುರಳಿಧರ ದೇಶಪಾಂಡೆ ಅವರು ಮತದಾನ ಜಾಗೃತಿ ಅರಿವು ಮೂಡಿಸಿದರು. ಬಳಿಕ ಮಾನವ ಸರಪಳಿ ಮೂಲಕ ಮತದಾನ ಅರಿವು ಮೂಡಿಸಲಾಯಿತು.

ಕಾರ್ಯ ನಿರ್ವಾಹಕ ಅಧಿಕಾರಿ ತಾರಾ ಎನ್ ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಈ ಸಂದರ್ಭದಲ್ಲಿ ಮಾನ್ಯ ಸಹಾಯಕ ನಿರ್ದೇಶಕ ಮಹಾಂತೇಶ್ ಕೋಟಿ , ಐಇಸಿ ಸಂಯೋಜಕ ಬಸವರಾಜ ಕೊಪ್ಪದ, ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕ ಕೃಷ್ಣಾಜಿ ಪವಾರ್ , MRW, VRW ಅವರು ಉಪಸ್ಥಿತರಿದ್ದರು.

## ಆಶಾ ಕಾರ್ಯಕರ್ತೆಯರಿಂದ ಓಆರ್ಎಸ್ ವಿತರಣೆ



**ರಬಕವಿ–ಬನಹಟ್ಟಿ :** ಏಪ್ರೀಲ ತಿಂಗಳ ಆರಂಭವಾಗುತ್ತಿದ್ದಂತೆ ಎಲ್ಲೆಡೆ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು , 42 ಡಿಗ್ರಿವರೆಗೂ ಹೋಗಿ ತಲುಪಿದ ಕಾರಣ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಅದಕ್ಕಾಗಿ ಸರ್ಕಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ ಅವಳಿ ನಗರದ ಸ್ಲಮ್ ಏರಿಯಾಗಳು ಸೇರಿದಂತೆ ಅನೇಕ ಕಡೆಗಳಲ್ಲಿ 14 ಕ್ಕೂ ಅಧೀಕ ಆಶಾ ಕಾರ್ಯಕರ್ತೆಯರು ಓಆರ್ಎಸ್ ಸೇರಿದಂಗೆ ಇನ್ನಿತರ ದೇಹ ತಂಪುಗೊಳಿಸಲು ಪದಾರ್ಥಗಳನ್ನು ನೀಡುತ್ತಿದ್ದಾರೆಂದು ಕಿರಿಯ ಆರೋಗ್ಯ ಸಹಾಯಕಿ ಅನು ಬಡಿಗೇರ ಹಾಗೂ ಸಾವಿತ್ರಿ ಪವಡಶೆಟ್ಟಿ ತಿಳಿಸಿದರು. ಬಿಸಿಲಿನಿಂದ ಏನಾದರೂ ತೊಂದರೆಯಾದರೆ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ 1077 ಗೇ ಕರೆಮಾಡಲು ತಿಳಿಸಿದರು.

ಸೋಮವಾರ ರಬಕವಿ ನಗರದ ಸ್ಲಮ್ ಏರಿಯಾಗಳಲ್ಲಿ ಬಿಸಿಲಿನಿಂದಾಗುವ ಹಾನಿಗಳು ಮತ್ತು ಅದರಿಂದ ಹೇಗೆ ರಕ್ಷಿಸಿಕೊಳ್ಳಬೇಕು ಎಂದು ಜನರಲ್ಲಿ ಜಾಗೃತಿ ಮೂಡಿಸಿ ಓಆರ್ಎಸ್ ಪ್ಯಾಕೇಟ್ಗಳನ್ನು ವಿತರಿಸಿದರು. ಕಾಟನ್ ಬಟ್ಟೆಯನ್ನೇ ಧರಿಸಿ, ರಸ್ತೆ ಬದಿಯಲ್ಲಿ ಕತ್ತರಿಸಿ ಇಟ್ಟ ಹಣ್ಣು ಅಥವಾ ಆಹಾರಗಳನ್ನು ತಿನ್ನಬೇಡಿ, ನಿಮ್ಮ ದೇಹದ ತೂಕ ಇಪ್ಪತ್ತು ಕೇಜಿಗೆ ಒಂದು ಲೀಟರ್ನಂತೆ ಗಂಟೆಗೆ ಒಂದು ಲೋಟದ ಪ್ರಮಾಣದಲ್ಲಿ ನೀರು ಕುಡಿಯಿರಿ ಎಂದರು.

ಆಶಾ ಕಾರ್ಯಕರ್ತೆ ಬೇಬಿಶ್ರೀ ಹಾಸಿಲಕರ ಮಾತನಾಡಿ, ಬಿಸಿಲಿನ ತಾಪಕ್ಕೆ ವಯೋವೃದ್ಧರಿಗೆ ತುಂಬಾ ತೊಂದರೆಯಾಗುವ ಸಾಧ್ಯತೆ ಇದೆ. ಆದಕಾರಣ ಅವರನ್ನು ತಂಪಾದ ಸ್ಥಳಗಳಲ್ಲಿ ಇರುವಂತೆ ನೋಡಿಕೊಳ್ಳಿ, ನಿಂಬೆ ರಸ, ಓಆರ್ಎಸ್ ಕುಡಿಸಿರಿ ಎಂದು ಹೇಳಿ ಓಆರ್ಎಸ್ ಪೊಟ್ಟಣಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಸಾವಿತ್ರಿ ಪವಾಡಶೆಟ್ಟಿ, ಲಕ್ಷ್ಮಿ ತಳವಾರ, ಭಾರತಿ ಸಿರಗೂರ, ಶೋಭಾ ಗುಣಕಿ, ಸಕ್ಕೂಬಾಯಿ ಪೂಜಾರಿ, ಸವಿತಾ ಬಾವಲತ್ತಿ, ಸವಿತಾ ಔವರಸಂಗ, ಶೀವಲೀಲಾ ಪಾಟೀಲ, ಕವಿತಾ ಆಲಗೂರ, ಯಲ್ಲವ್ವ ಉಂಕಿ, ಲಕ್ಷ್ಮಿ ಹಳ್ಳಿ, ಪೂಜಾ ಅಡವಿತೋಟ, ಗೀತಾ ಆರಗಿ ಸೇರಿದಂತೆ ಅನೇಕರಿದ್ದರು.

## ದಾಖಲೆ ಇಲ್ಲದ 10.77 ಲಕ್ಷ ರೂ.ಗಳ ನಗದು ವಶ



**ಬಾಗಲಕೋಟೆ :** ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಡಿ ದಾಖಲೆ ಇಲ್ಲದ 10.77 ಲಕ್ಷ ರೂ.ಗಳ ನಗದು ಹಣವನ್ನು ನಾಯನೇಗಲಿ ಚೆಕ್‌ಪೋಸ್ಟ ತಪಾಸಣೆವೇಳೆ ಸೋಮವಾರ ವಶಕ್ಕೆಪಡೆಯಲಾಗಿದೆ. ಬಾಗಲಕೋಟೆ ಮತಕ್ಷೇತ್ರ ವ್ಯಾಪ್ತಿಯ ನಾಯನೇಗಲಿ ಚೆಕ್‌ಪೋಸ್ಟನ ಎಸ್ಎಸ್‌ಟಿ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ಜಂಟಿ ಕಾರ್ಯಾಚರಣೆ ವೇಳೆಯಲ್ಲಿ ಪ್ರತ್ಯೇಕ 5 ಪ್ರಕರಣಗಳಡಿಇ 5 ಗೂಡ್ಸ ವಾಹನಗಳ ತಪಾಸಣೆಯಲ್ಲಿ ಒಟ್ಟು 10,77,500 ರೂ.ಗಳ ನಗದು ಹಣ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

## ಪುಸ್ತಕಗಳು ನಿತ್ಯಜೀವನದ ಸಂಗಾತಿಗಳಾಗಲಿ: ಗೊಂಬಿ



**ರಬಕವಿ :** ಪುಸ್ತಕಗಳು ನಮ್ಮನ್ನು ಸ್ನೇಹಿತನಂತೆ ಕಾಪಾಡಿ, ತಾಯಿಯಂತೆ ಪೋಷಿಸುತ್ತವೆ. ಗುರುಗಳಂತೆ ತಿದ್ದಿ ತೀಡುತ್ತವೆ. ಮುಖದಲ್ಲಿ ಮಂದಹಾಸ ಮೂಡಿಸುವ ಪುಸ್ತಕಗಳು ನಮ್ಮ ನಿತ್ಯ ಜೀವನದ ಸಂಗಾತಿಗಳಾಗಬೇಕು ಎಂದು ಸಮಾಜ ಸಂಘಟಕರು, ಹಿರಿಯರಾದ ಮಹಾಲಿಂಗಪುರದ ಜಿ. ಎಸ್. ಗೊಂಬಿ ಅಭಿಪ್ರಾಯಪಟ್ಟರು.

ರಬಕವಿಯ ದಲಾಲ ಸ್ಪೋರ್ಟ್ಸ್ ಕ್ಲಬ್ಬಿನ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ತಾಲೂಕು ಘಟಕ ರಬಕವಿ–ಬನಹಟ್ಟಿ, ವಲಯಗಳು ತೇರದಾಳ, ಮಹಾಲಿಂಗಪುರ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪುಸ್ತಕಾವ ಲೋಕನ–28 ಕಾರ್ಯಕ್ರಮದಲ್ಲಿ ಮಹಾಲಿಂಗಪುರದ ನಿವೃತ್ತ ಶಿಕ್ಷಕ ಶಿವಪ್ಪ ಎಸ್. ಕರಡಿ ಅವರ ಬೆಳಗುತಿದೆ ಜ್ಯೋತಿ ಕೃತಿ ಅವಲೋಕಿಸಿ ಮಾತನಾಡಿದರು. ವೈವಿಧ್ಯಮಯ 33 ವಿಶಿಷ್ಠ , ವೈಚಾರಿಕ ಲೇಖನಗಳು ಎಲ್ಲರ ಗಮನ ಸೆಳೆಯುತ್ತವೆ ಎಂದರು.

ಉ ದ್ದಿ ವ್ ಂ ದಾ ರ್ ರಾ ದ್ ಬಸವರಾಜ ದಲಾಲ ಅಧ್ಯಕ್ಷತೆ ವಹಿಸಿದ್ದರು. ಅವರು ಕಸಾಪ ಮೂಲಕ ತಾಲ್ಲೂಕಿನಲ್ಲಿ ಸಾಹಿತ್ಯಿಕ ಚಟುವಟಿಕೆಗಳು ನಿರಂತರ ಸಾಗಿರುವುದು ಗ್ ವ್ ಂ ನಾ ಹ್ ರ್ ವಾ ಗಿ ದ್. ತಾವು ಸದಾಕಾಲವೂ ಇಂಥ ಕಾರ್ಯಕ್ರಮಗಳಿಗೆ ಪ್ರೋತ್ಸಾಹ, ಸಹಕಾರ, ನೆರವು ನೀಡಲಾಗುವುದು ಎಂದರು.

ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿ ಮಾತನಾಡಿ, ಸಾಹಿತ್ಯ ಕೃತಿಗಳು ಉಪದೇಶ ಮಾಡುವುದಿಲ್ಲ. ಚಿಂತನೆಗೆ ದಾರಿ ಮಾಡಿಕೊಡುತ್ತವೆ. ಪುಸ್ತಕಗಳನ್ನು, ಪತ್ರಿಕೆಗಳನ್ನು ಕೊಂಡು ಓದಬೇಕು ಎಂದರು.

ಪ್ರೊ. ಎಂ. ಎಸ್. ಬದಾಮಿ, ರವೀಂದ್ರ ಅಷ್ಟಗಿ, ದಾಕ್ಷಾಯಣಿ ಮಂಡಿ, ಮಹಾದೇವ ಕವಿಶೆಟ್ಟಿ, ದಾನಪ್ಪ ಆಸಂಗಿ, ಶರತ್ ಜಂಬಗಿ, ಈರಣ್ಣ ತೇರಣಿ ಸಂವಾದದಲ್ಲಿ ಮಾತನಾಡಿ ಸಾಹಿತ್ಯಾಸಕ್ತರ ಗಮನ ಸೆಳೆದ ಪುಸ್ತಕ ಅವಲೋಕನದಲ್ಲಿ ಯುವ ಬರಹಗಾರರು ಭಾಗವಹಿಸಬೇಕು ಎಂದರು.

ಕೃತಿಕಾರ ಶಿ. ಶಂ. ಕರಡಿ 'ಕನ್ನಡದ ಕುಲದೇವಿ ಕಾಪಾಡು ಬಾ ತಾಯಿ' ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದರು.

ತಾಲೂಕು ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ ಪ್ರಾಸ್ತಾವಿಕವಾಗಿ ಮಾತನಾಡಿ ಮುಂದಿನ ದಿನಗಳಲ್ಲಿ ಸಾಹಿತ್ಯ ಪರಿಷತ್ತು ನವ ನವೀನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ದತ್ತಿನಿಧಿ, ತಾಲ್ಲೂಕು ಸಾಹಿತ್ಯ ಸಮ್ಮೇಳನ, ಕಾವ್ಯಕಮ್ಮಟ, ಗೀತಗಾಯನ ಶಿಬಿರ, ಮಹಿಳಾ ಕವಿಗೋಷ್ಠಿ ಆಯೋಜಿಸಲಿದೆ ಎಂದರು.

ಪ್ರಾರಂಭದಲ್ಲಿ ಸುಜಾತಾ ಗೌಡರ ಪ್ರಾರ್ಥಿಸಿದರು. ಬಸವರಾಜ ಮೇಟಿ ನಿರೂಪಿಸಿದರು. ಹಿರಿಯ ಸಾಹಿತಿ ಶಿವಾನಂದ ದಾಶಾಳ ವಂದಿಸಿದರು.

ಹಿರಿಯ ಸಾಹಿತಿ ಜಿ. ಎಸ್. ವಡಗಾಂವಿ, ಮಲಕಪ್ಪ ಜವಳಗಿ, ಕಲಾವಿದ ಮಲ್ಲಪ್ಪ ಗಣಿ, ಡಾ. ಜಿ. ಎಚ್. ಚಿತ್ತರಗಿ, ಈರಣ್ಣ ಗಣಮುಖಿ, ಮಲ್ಲೇಶಪ್ಪ ಕುಚನೂರ, ಚನ್ನಮಲ್ಲ ಕರಡಿ, ಅಶೋಕ ಕರಡಿ, ರೇವಣಸಿದ್ಧ ಗೌಡರ, ಬಸವರಾಜ ಬುಟ್ಟಣ್ಣವರ ಇನ್ನಿತರರು ಪಾಲ್ಗೊಂಡಿದ್ದರು.

## ಮತ್ತಷ್ಟು ಮಾರುಕಟ್ಟೆ ವಿಸ್ತರಣೆಗೆ ಸನ್ನದ್ಧ: ಕೆಎಂಎಫ್



**ರಬಕವಿ–ಬನಹಟ್ಟಿ :** ಉತ್ತರ ಕರ್ನಾಟಕದಲ್ಲಿ ತನ್ನದೇಯಾದ ವೈಶಿಷ್ಟ್ಯ ಹೊಂದಿರುವ ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲೂಕಿನ ಬನಹಟ್ಟಿಯ ಕೆಎಂಎಫ್‌ಡಿಡಿಎಲ್‌ನ ಹಾಲು ಉತ್ಪನ್ನಗಳಿಗೆ ಮತ್ತಷ್ಟು ಮಾರುಕಟ್ಟೆಯ ಆಯಾಮಗಳನ್ನು ಸೃಷ್ಟಿಸುವ ಮೂಲಕ ಅಭಿವೃದ್ಧಿಗೆ ಅವಕಾಶವಿದೆಯೆಂದು ರಾಜ್ಯ ಕೆಎಂಎಫ್ ಆಡಳಿತ ವ್ಯವಸ್ಥಾಪಕ ಜಗದೀಶ ಎಂ.ಕೆ. ತಿಳಿಸಿದರು.

ಸೋಮವಾರ ಇಲ್ಲಿನ ಕೆಎಂಎಫ್ ಡಿಡಿಎಲ್ ಘಟಕಕ್ಕೆ ಭೆಟ್ಟಿ ನೀಡಿ ಉತ್ಪಾದನಾ ಹಾಗು ಮಾರುಕಟ್ಟೆ ಘಟಕ ವೀಕ್ಷಣೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಂಪು ಉತ್ಪನ್ನಗಳಿಗೆ ವಿಪುಲ ಅವಕಾಶವಿದ್ದು, ಮುಂದಿ ದಿನಗಳಲ್ಲಿ ತಂಪು ಉತ್ಪಾದನೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಇನ್ನಷ್ಟು ಅಭಿವೃದ್ಧಿಗೆ ಅವಕಾಶ ನೀಡಲಾಗುವದೆಂದು ಸ್ಪಷ್ಟಪಡಿಸಿದರು.

ಈಗಾಗಲೇ ನಿರಂತರ ಕಾರ್ಯನಿರ್ವಹಣೆಯಲ್ಲಿರುವ ಘಟಕದಲ್ಲಿ ಎಲ್ಲ ಆಯಾಮಗಳಲ್ಲಿಯೂ ಭರ್ತಿ ಕಾರ್ಯ ನಡೆಯುತ್ತಿದೆ. ಉತ್ತರ ಕರ್ನಾಟಕ ಹಾಗು ದಕ್ಷಿಣ ಮಹಾರಾಷ್ಟ್ರ ವ್ಯಾಪ್ತಿಯಲ್ಲಿ ಪೇಡಾ, ಪಡಕಿ, ಶ್ರೀಖಂಡ, ಹಾಲಿನ ಪೌಡರ್, ತಂಪು ಪಾನೀಯ, ಐಸ್ಕ್ರೀಂ ಸೇರಿದಂತೆ ಇತರೆ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಗ್ಗೆಯಿಟ್ಟು, ಗುಣಮಟ್ಟದ ಆಹಾರ ಪೂರೈಕೆಯಲ್ಲಿ ಯಶಸ್ವಿ ಕಂಡಿದೆ. ಬಡವರಿಗೂ ಕೈಗೆಟುವ ದರದಲ್ಲಿ ಕೆಎಂಎಫ್ ಪದಾರ್ಥಗಳನ್ನು ಒದಗಿಸುವಲ್ಲಿ ಯಶಸ್ವಿ ಕಂಡಿರುವದು ಗಮನೀಯವಾದುದು ಎಂದರು.

ನಿರ್ದೇಶಕರಾದ ಡಾ. ಬಿ.ಪಿ. ಸುರೇಶ, ಶ್ರೀಶೈಲಗೌಡ ಪಾಟೀಲ, ವಿಜಯಪುರ–ಬಾಗಲಕೋಟೆ ಹಾಲು ಒಕ್ಕೂಟದ ಅಧ್ಯಕ್ಷ ಸಂಜಯ ತಳೇವಾಡ. ಕಾರ್ಯದರ್ಶಿ ಎಸ್.ಆರ್. ದೇಶಪಾಂಡೆ, ಕೆಎಂಎಫ್‌ಡಿಡಿಎಲ್ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್. ಸಿದ್ಧೇಗೌಡ, ಪಿ. ನಟರಾಜ, ರಾಘವೇಂದ್ರ ಜೋಷಿ, ಪಿ. ಲಿಂಗಂ, ದಯಾನಂದ ಎಂ. ಅಜಯಕುಮಾರ, ಸುನಿತಾ, ಸಿದ್ದಾರೂಢ ತಳವಾರ, ಸಂತೋಷ ರಾಠೋಡ, ಸತೀಷ, ಎಚ್.ಜಿ. ಹೊಸಗೌಡ, ಸಂಜಯ ಭಜಂತ್ರಿ ಸೇರಿದಂತೆ ಅನೇಕರಿದ್ದರು.

# ಓದು ಗೀಳಾಗಬೇಕೆ ಹೊರತು ಒತ್ತಡವಾಗಬಾರದು: ಲತಾ ಕೆ.ಎಸ್. ಹೆಗಡೆ



ಸಾರ್ವಜನಿಕ ಗ್ರಂಥಾಲಯ ಇಲಾಖೆ, ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಗ್ರಂಥದ ಗುಡಿ (Temple of Books) ಕುಮಾರಸ್ವಾಮಿ ಬಡಾವಣೆ ಶಾಖೆ, ಬೆಂಗಳೂರು ಹಾಗು ಸ್ವಸ್ಥ ಸಮೃದ್ಧ ಭಾರತ (ರಿ) ಮತ್ತು ರಂಗಸಾಗರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆ ಇವರ ಸಹಯೋಗದೊಂದಿಗೆ ನಲ್ಮೆಯ ಪುಟಾಣಿಗಳಿಗೆ ಆಟದೊಂದಿಗೆ ಪಾಠ ಕಲಿಸುವ ದೇಶದ ಸತ್ಪ್ರಜೆಗಳಾದ ಮಕ್ಕಳಿಗೆ ವ್ಯಕ್ತಿತ್ವ ವಿಕಸನದೊಂದಿಗೆ ಸಾಹಿತ್ಯಿಕ, ಸಾಂಸ್ಕೃತಿಕ ವ್ಯಕ್ತಿ ವಿಷಯಗಳನ್ನು ಪರಿಚಯಿಸುವ ಮತ್ತು ಅವರಲ್ಲಿನ ಸೂಕ್ತ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಪುಸ್ತಕ ಲೇಖಕರನ್ನು ಪರಿಚಯಿಸುವ ನಿತ್ಯ ವಿನೂತನ ಕಾರ್ಯಕ್ರಮ ಯಶಸ್ವಿ 132ನೇ ಪುಟ್ಟ ಮಗು ಕಥೆ ಕೇಳು ವಿಶೇಷ ಸಂಚಿಕೆ ಹಾಗು ಡಾ. ಬಿ.ಆರ್.ಅಂಬೇಡ್ಕರ್ ಜಯಂತಿಯ ವಿಶೇಷ ಸಂದರ್ಭದಲ್ಲಿ ಜ್ಯೋತಿ ಬೆಳಗುವುದರೊಂದಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಪುಷ್ಪ ನಮನಗಳನ್ನು ಸಲ್ಲಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆ ಮಾಡಿ ಸಭೆಯನ್ನುದ್ದೇಶಿಸಿ ಮಾತನಾಡಿದ ಸಾಹಿತಿ ಶ್ರೀಮತಿ ಲತಾ ಕೆ.ಎಸ್. ಹೆಗಡೆಯವರು ಜ್ಞಾನಾರ್ಜನೆಗಾಗಿ ಓದುವುದು ಬಹಳ ಮುಖ್ಯ. ಪಠ್ಯ ಪುಸ್ತಕಗಳನ್ನು ಮಾತ್ರವಲ್ಲದೇ ನಿಮಗಿಷ್ಟವಾಗುವ ಯಾವುದಾದರೂ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಓದುವುದು ಗೀಳಾಗಬೇಕೇ ಹೊರತು ಒತ್ತಡವಾಗಬಾರದು. ದೇಶ ಸುತ್ತು, ಇಲ್ಲ ಕೋಶ ಓದು ಎಂಬ ನಾಣ್ನುಡಿ ಹಿಂದೆ ಇತ್ತು. ವೇಗವಾಗಿ ಬದಲಾಗುತ್ತಿರುವ ಡಿಜಿಟಲ್ ಯುಗದಲ್ಲಿ ಪುಸ್ತಕ ಓದುವವರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿರುವುದು ವಿಷಾದನೀಯ. ಇಂತಹ ಸ್ಥಿತಿಯಲ್ಲೂ ಓದುವ ಹವ್ಯಾಸವನ್ನು ಉಳಿಸಿ ಬೆಳೆಸಬೇಕೆಂಬ ದೃಢ ಸಂಕಲ್ಪದಿಂದ ಸುಮಾರು ಮೂರು ದಶಕಗಳಿಂದ ಈ ಗ್ರಂಥದ ಗುಡಿಯನ್ನು ನಡೆಸುತ್ತಿರುವ ಆನಂದ್ ಸರ್ ಗೆ ಮೊದಲು ಅಭಿನಂದನೆಗಳನ್ನು ಸಲ್ಲಿಸುತ್ತ, ಸುಮಾರು ಒಂದೂವರೆ ಲಕ್ಷಕ್ಕೂ ಅಧಿಕ ಪುಸ್ತಕ ಸಂಗ್ರಹಣೆ ಮತ್ತು ನಿರ್ವಹಣೆ ಕಾರ್ಯ ಸುಲಭವಲ್ಲ. ಕರ್ನಾಟಕದ ನಂಬರ್ ಒನ್ ಗ್ರಂಥಾಲಯ ಎನ್ನುವ ಹೆಗ್ಗಳಿಕೆ ಗಳಿಸಿರುವ ಈ ಗ್ರಂಥಾಲಯವನ್ನು ನೋಡುವ ಅವಕಾಶ ನಮಗೆ ದೊರೆತದ್ದು ಭಾಗ್ಯವೇ ಸರಿ. ಸುಮಾರು ಹತ್ತು ವರುಷದಿಂದ ಪ್ರತಿದಿನ ಸಂಜೆ ಗ್ರಂಥಾಲಯದಲ್ಲಿರುವ ಎಲ್ಲರಿಗೂ ಚಹ/ಕಾಫಿ ಮತ್ತು ಬಿಸ್ಕತ್ತುಗಳನ್ನು ನೀಡಿ ಅವರಿಗೆ ಓದಲು ಪ್ರೊತ್ಸಾಹ ನೀಡುವ ಕಾರ್ಯ ಶ್ಲಾಘನೀಯ. ಪ್ರತಿ ತಿಂಗಳು ಎರಡನೇ ಮತ್ತು ನಾಲ್ಕನೇ ಶನಿವಾರ ಮಕ್ಕಳಿಗಾಗಿ ನಡೆಸುವ ಪುಟ್ಟ ಮಗು ಕಥೆ ಕೇಳು ಸಂಚಿಕೆಯೊಂದಿಗೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಗ್ರಂಥಾಲಯ ನಡೆಸುತ್ತಿರುವುದು ಪ್ರಶಂಸನೀಯ. ಓದಿನ ಬಗ್ಗೆ ಒಲವು ಬೆಳೆಯಬೇಕೆ ಹೊರತು ಒತ್ತಡ ಹೇರಬಾರದು. ಓದು ಎನ್ನುವುದು ಒಂದು ಪ್ರಯಾಣವಿದ್ದಂತೆ. ಆರಂಭ ಮತ್ತು ಅಂತ್ಯಕ್ಕಿಂತ ಆ ಪ್ರಯಾಣದ ಅನುಭವ ಸದಾ ನಮ್ಮೊಂದಿಗೆ ಉಳಿಯಬೇಕು. ಓದು ನಮ್ಮನ್ನು ಹೊಸದೊಂದು ಜಗತ್ತಿಗೆ ಪರಿಚಯಿಸುತ್ತದೆ. ಹೊಸ ಹೊಸ ವಿಷಯಗಳ ಗ್ರಹಣೆಯಿಂದ ನಮ್ಮ ತಿಳುವಳಿಕೆ, ನಡೆ ನುಡಿಗಳಲ್ಲೂ ಸಹ ಬದಲಾವಣೆ ಉಂಟಾಗುತ್ತದೆ. ಒಳ್ಳೆಯ. ಪುಸ್ತಕಗಳು ಸ್ನೇಹಿತರಿದ್ದಂತೆ. ಹಾಗಾಗಿ ನಿಮಗೆ ಸಮಯ ಮತ್ತು ಅವಕಾಶ ಸಿಕ್ಕಾಗ ಪುಸ್ತಕಗಳನ್ನು ಓದಿ. ಅದರಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳಿ. ಪುಸ್ತಕಗಳ ಅವಲೋಕನ ಮತ್ತು ವಿಮರ್ಶೆ ಮಾಡುತ್ತ ಹೋದಂತೆ, ನಿಮ್ಮ ಪದಗಳ ಜ್ಞಾನ, ವಿಷಯದ ಮೇಲಿನ ಹಿಡಿತ ಹೆಚ್ಚಾಗುತ್ತದೆ. ವಿದ್ಯೆಯ ಜೊತೆಗೆ ವಿನಯವು ಸೇರಿದರೆ ವಿಜಯ ಸದಾ ನಿಮ್ಮದಾಗುತ್ತದೆಂದು ತಿಳಿಸಿದರು. ಕಾರ್ಯಕ್ರಮದ ಮತ್ತೊಬ್ಬ ಅತಿಥಿಗಳಾದ ಶ್ರೀಯುತ ವೆಂಕಟೇಶ ಜೋಶಿಯವರು ಮಕ್ಕಳಲ್ಲಿ ಕಲಿಕೆಯೊಂದಿಗೆ ಸಂಗೀತದ ಕಡೆ ಆಸಕ್ತಿ ಮೂಡಲಿ ಎಂದು ಹಾರೈಸಿದರು. ಸಾಹಿತಿ ಮಂಜುನಾಥ್ ತಾತಗುಣಿಯವರು ತಮ್ಮ ಸಾಹಿತ್ಯ ಕೃಷಿಯ ಬಗ್ಗೆ ತಿಳಿಸಿದರು. ಶ್ರೀಮತಿ ರಾಜೇಶ್ವರಿ ಜೋಶಿ, ರಂಗ ಕಲಾವಿದೆ, ಗಾಯಕಿ ಸರಿಗಮಪ ಜೀವನದಲ್ಲಿ ಎಷ್ಟು ಮುಖ್ಯವೆಂದು ತಿಳಿಸಿದರು. ಮಕ್ಕಳಿಂದ ಶ್ಲೋಕ ಪಠಣೆ ಮತ್ತು ಪ್ರಾರ್ಥನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದ ನಿರ್ವಹಣೆ ಮತ್ತು ನಿರೂಪಣೆಯನ್ನು ಗ್ರಂಥದ ಗುಡಿ ಕಾರ್ಯಾಲಯದ ಶ್ರೀಯುತ ಎಸ್ ಆನಂದ್, ಪ್ರಭಾರದಾರರು, ನಗರ ಕೇಂದ್ರ ಗ್ರಂಥಾಲಯ ಕುಮಾರಸ್ವಾಮಿ ಬಡಾವಣೆ ನೆರವೇರಿಸಿದರು.

ನೀತಿ ಕಥೆಗಳ ಪ್ರಸ್ತುತಿಯನ್ನು ಶ್ರೀ ಯು ಸುಬ್ರಮಣ್ಯ ಆಚಾರ್ ನಡೆಸಿಕೊಟ್ಟರು. ಡಾ. ಬಿ ಆರ್ ಅಂಬೇಡ್ಕರ್ ಮತ್ತು ಸಂವಿಧಾನದ ಕುರಿತು ರಸಪ್ರಶ್ನೆ ಕಾರ್ಯಕ್ರಮವನ್ನು ಶ್ರೀ ಎ.ವಿ. ಗೋಪಾಲ್ ಇವರ ನೇತೃತ್ವದಲ್ಲಿ ನಡೆಯಿತು. ಒಗಟು ಗಾದೆಗಳ ಪ್ರಸ್ತುತಿ ಹಾಗೂ ಸ್ಥಳದಲ್ಲಿಯೇ ಮಕ್ಕಳಿಗೆ ವಿಶೇಷ ಕೊಡುಗೆಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಪುಸ್ತಕ ಕಾಣಿಕೆಯನ್ನು ನೀಡಲಾಯಿತು. ಮಕ್ಕಳು ಹಾಗು ಅತಿಥಿಗಳಿಂದ ಒಂದು ಕಥೆ, ಒಂದು ಹಾಡು ಪ್ರಸ್ತುತ ಪಡಿಸಲಾಯಿತು. ಜೋಶಿ ಸ್ಕೂಲ್ ಆಫ್ ಮ್ಯೂಸಿಕ್ ಇವರಿಂದ ಸಂಗೀತ ಸಂಜೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಸರ್ವರಿಗೂ ಕೃತಜ್ಞತೆಯನ್ನು ಶ್ರೀಯುತ ಎಸ್ ಆನಂದ್ ಪ್ರಭಾರದಾರರು, ನಗರ ಕೇಂದ್ರ ಗ್ರಂಥಾಲಯ ಕುಮಾರಸ್ವಾಮಿ ಬಡಾವಣೆ, ಬೆಂಗಳೂರು ಮತ್ತು ಶ್ರೀಮತಿ ಎನ್ ಸರಸ್ವತಿ ಉಪ ನಿರ್ದೇಶಕರು ನಗರ ಕೇಂದ್ರ ಗ್ರಂಥಾಲಯ ದಕ್ಷಿಣ ವಲಯ ಜಯನಗರ ಬೆಂಗಳೂರು ಇವರ ಪರವಾಗಿ ಸಲ್ಲಿಸಲಾಯಿತು.

# ಆದ್ಯವಚನಕಾರ ದೇವರ ದಾಸಿಮಯ್ಯನವರ ಜಯಂತಿ



**ಮಹಾಲಿಂಗಪುರ:** ಸ್ಥಳಿಯನೇಕಾರಸಮಾಜ ಬಾಂಧವರು ಬನಶಂಕರಿ ದೇವಸ್ಥಾನದಲ್ಲಿ ಶನಿವಾರ ಆದ್ಯ ವಚನಕಾರ ದೇವರ ದಾಸಿಮಯ್ಯನವರ 1045ನೇ ಜಯಂತಿ ಹಾಗೂ ಜಗದ್ಗುರು ಶ್ರೀಸಿದ್ದಾರೂಢರ 166ನೇ ವಾರದ ಸತ್ಸಂಗವನ್ನು ನಡೆಸಿದರು.

ಅನ್ನಪೂರ್ಣೇಶ್ವರಿ ನೇಕಾರ ಮಹಿಳಾ ಸಂಘದ ಮಹಿಳೆಯರು ಜೋಗುಳ ಪದಗಳನ್ನು ಹಾಡಿ, ತೊಟ್ಟಿಲು ತೂಗಿ ನಾಮಕರಣ ಮಹೋತ್ಸವ ನೇರವೇ-ರಿಸಿದರು.

ಸಾನಿಧ್ಯವಹಿಸಿದ್ದ ಸಹಜಾನಂದ ಸ್ವಾಮಿಜಿ ಮಾತನಾಡಿ ಆ ದೇವರ ದಾಸಿಮಯ್ಯ ಮತ್ತು ಜಗದ್ಗುರು ಸಿದ್ದಾರೂಢರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ ಮಾತನಾಡಿ ಆದ್ಯವಚನಕಾರ ದೇವರ ದಾಸಿಮಯ್ಯ ನೇಕಾರ ಸಮಾಜಕ್ಕೆ ಮಾತ್ರಸೀಮಿತವಲ್ಲ,ಪ್ರತಿಯೊಬ್ಬನೇಕಾರರು ತಮ್ಮ ಮಕ್ಕಳ ಮದುವೆ ಸಮಯದಲ್ಲಿ ದಾಸಿಮಯ್ಯನವರ ವಚನಗಳನ್ನು ಮುದ್ರಿಸಿ ಹಂಚುವ ಕಾರ್ಯ ಮಾಡಬೇಕಾಗಿದೆ. ದೇವರ ದಾಸಿಮಯ್ಯನವರಂತೆ ಸಮಾಜದ ಬಂಧುಗಳು ನೇಯ್ಗೆ ಕಾಯಕದ ಜೊತೆಗೆ ದಾಸೋಹ, ದಾನ, ಸಹಾಯ, ಸಹಕಾರ ಗುಣಗಳನ್ನು ಮೈಗೂಡಿಸಿಕೊಂಡು ಸಮಾಜದಲ್ಲಿ ಮಾದರಿ ವ್ಯಕ್ತಿಗಳಾಗಿ ಬದುಕಬೇಕು. ದಾಸಿಮಯ್ಯನವರನ್ನುಮನೆ, ಮನದಲ್ಲಿ ಪೂಜಿಸಿ, ಅವರ ತತತ್ವ ಆದ-ರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದರು. ರನ್ನಬೆಳಗಲಿಯ ಯೋಗಗುರು ಸದಾಶಿವ ಗುರೂಜಿ, ಮಲ್ಲೇಶಪ್ಪ ಕಟಗಿ ಶರಣರು ಮಾತನಾಡಿ ದಾಸಿಮಯ್ಯನವರು ನೇಕಾರ ಸಮುದಾಯದ ಶಕ್ತಿಯಾಗಿದ್ದು, ಜನರಲ್ಲಿ ಆತ್ಮವಿಶ್ವಾಸ, ಸ್ವಾಭಿಮಾನ ತುಂಬಿದ ಶ್ರೇಷ್ಠ ತತ್ವಜ್ಞಾನಿಯಾಗಿದ್ದಾರೆ. ಪ್ರತಿಯೊಬ್ಬ ನೇಕಾರರು ಕಾಯಕದ ಜೊತೆಗೆ ಆಧ-ಾತ್ಮ, ತತ್ವ ಚಿಂತನೆ, ಉತ್ತಮ ಸಂಸ್ಕೃತಿ ಸಂಸ್ಕಾರಗಳನ್ನು ಬೆಳೆಸಿಕೊಂಡು ಇತರ-ರಿಗೆ ಮಾದರಿಯಾಗಬೇಕು ಎಂದರು. ಶ್ರೀಶೈಲಪ್ಪ ಬಾಡನವರ ಕಾರ್ಯ ಕ್ರಮದ ಅಧ್ಯಕ್ಷತೆವಹಿಸಿದ್ದರು. ಶಿಕ್ಷಕ ಎಸ್.ಕೆ.ಗಿಂ-ಡೆ ಸಿದ್ದಾರೂಢರ ಚರಿತ್ರೆಯ 53ನೇ ಅಧ್ಯಾಯವನ್ನು ಪಠಿಸಿದರು.

ಹಿರಿಯರಾದ ಮಲ್ಲಪ್ಪ ಭಾವಿಕಟ್ಟಿ, ಲಕ್ಕಪ್ಪ ಚಮಕೇರಿ, ನಾರಾಯಣ ಕಿರಗಿ, ಶಂಕರ ಯಾದವಾಡ, ಶ್ರೀಶೈಲ ಬಾಳಿಗಿಡದ ಲಕ್ಕಪ್ಪ ಚಮಕೇರಿ, ಶಿದಗಿರೆಪ್ಪ ಕಾಗಿ, ಬಿ.ಸಿ.ಪೂಜಾರಿ, ಅಶೋಕ ಬಾಣ-ಕಾರ, ಚಂದ್ರು ಕಾಗಿ, ಗುರುಪಾದ ಅಂಬಿ, ಜಿ.ಎಸ್.ಗೊಂಬಿ, ಸುನೀಲ ಜಮಖಂಡಿ, ಶಂಕರ ಅಂಬಿ, ಈಶ್ವರ ಚಮಕೇರಿ, ಸಂಜು ಜಮಖಂಡಿ, ಶ್ರೀಶೈಲ ಕಿರಗಟಗಿ, ಬಸವರಾಜ ಹಲ್ಯಾಳ, ಪ್ರಭು ಬೆಳಗಲಿ, ಪ್ರಕಾಶ ಬಾಡನವರ, ಶಿವಾನಂದ ಕಿತ್ತೂರ, ವಿನೋದ ಚಮಕೇರಿ, ಮಹಾದೇವಪ್ಪ ಹುಣಶ್ಯಾಳ, ಸತೀಶ ಸೋರಗಾಂವಿ, ಶಂಕರ ಹಿಕಡಿ, ಶಿವಾನಂದ ಸೋರಗಾಂವಿ, ಸುರೇಶ ನಿಂಬರಗಿ, ಮಹಾಲಿಂಗಪ್ಪ ಅನಂತಪುರ, ಶಂಕರೆಪ್ಪ ಹಣಗಂಡಿ,

ವರದಾನೆಪ್ಪ ಭಾವಿಕಟ್ಟಿ, ಸಿದ್ದಪ್ಪ ನಿಂಬರಗಿ, ಮಹಾಲಿಂಗ ಜಿಟ್ಟಿ, ಅಲ್ಲಪ್ಪ ಗುಂಜಿಗಾಂವಿ, ಸುಭಾಸ ಭಾವಿಕಟ್ಟಿ, ಹುಮಾಯೂನ ಸುತಾರ, ದಿನೇಶ ಕುದರಿ ಸೇರಿದಂತೆ ಹಲವರು ಇದ್ದರು.

# ಸಂಜಯ್ ಪಾಟೀಲ್ ಹೇಳಿಕೆಗೆ ಆಕ್ರೋಶ

**ಹಾರೂಗೇರಿ :** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕುರಿತು ಬಿಜೆಪಿ ಪಕ್ಷದ ಮಾಜಿ ಶಾಸಕ ಸಂಜಯ್ ಪಾಟೀಲ್ ಆಡಿರುವ ಅವಹೇಳನಕಾರಿ ಹೇಳಿಕೆಯು ಖಂಡನೀಯವಾದದ್ದು. ಇದರಿಂದ ಸಂಜಯ್ ಪಾಟೀಲರ ಸಂಸ್ಕೃತಿ ಎಂಥದ್ದು ಎಂಬುದು ತಿಳಿಯುತ್ತದೆ. ಇಡೀ ಮಹಿಳಾ ಕುಲಕ್ಕೆ ಅವಮಾನ ಮಾಡಿರುವ ಸಂಜಯ್ ಪಾಟೀಲ್ ಬಹಿರಂಗ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಕುಡಚಿ ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಡಾ. ಜಾಸ್ಮಿನ್ ಅಲಾಸೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಅನೇಕ ಮಹಿಳಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಪರೀಕ್ಷಾ ಫಲಿತಾಂಶಕ್ಕೆ ಸೆಲ್ಫಿ ಬಾಕ್ಸ್ ಆಕರ್ಷಣೆ




**ಮಹಾಲಿಂಗಪುರ :** ಸ್ಥಳೀಯ ಕೆ.ಎಲ್.ಇ ಸಂಸ್ಥೆಯ ಎಸ್.ಸಿ.ಪಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಏ.10 ರಂದು ಪರೀಕ್ಷಾ ಫಲಿತಾಂಶ ವೀಕ್ಷಿಸಲು ಬರುವ ಮಕ್ಕಳು ಮತ್ತು ಪಾಲಕರಿಗೆ ವಿಶೇಷ ಅಲಂಕೃತ ಸೆಲ್ಫಿ ಬಾಕ್ಸ್ ಗಮನ ಸೆಳೆಯಿತು. ಶಾಲೆಯ ಎಲ್‌ಕೆಜಿಯಿಂದ 7ನೇ ತರಗತಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲಾಗಿತ್ತು.

ವೀಕ್ಷಣೆಗೆ ಪಾಲಕರೊಂದಿಗೆ ಬಂದ ಮಕ್ಕಳು ಅಂಕಪಟ್ಟಿಯೊಂದಿಗೆ ಸೆಲ್ಫಿ ಬಾಕ್ಸ್‌ನಲ್ಲಿ ನಿಂತು ಕ್ಯಾಮೆರಾಗೆ ಪೋಜ್ ಕೊಟ್ಟು ಸಂಭ್ರಮಿಸಿದರು. ಪಾಲಕರು ಮತ್ತು ಶಿಕ್ಷಕರು ಕೂಡ ಪಾಸಾಜ ಮಕ್ಕಳೊಂದಿಗೆ ಸೆಲ್ಫಿಗೆ ಮುಖ ಕೊಟ್ಟು ಸಡಗರ ಹಂಚಿಕೊಂಡರು.

# ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತಿಸಿದ್ದ

# ಜಲಿಯನ್ ವಾಲಾಬಾಗ್ ದುರಂತ






ದ್ವಿಶತಮಾನಕ್ಕೂ ಅಧಿಕ ಕಾಲ ಭಾರತೀಯರ ಮೇಲೆ ಆಳ್ವಿಕೆ ನಡೆಸಿದ್ದ ಆಂಗ್ಲರದೇಶವನ್ನುಇಂದುಭಾರತೀಯ ಮೂಲದ ರಿಶಿ ಸುನಕ್ ಅಲ್ಲಿನ ಪ್ರಧಾನ ಮಂತ್ರಿಯಾಗಿ ಆಡಳಿತದ ಚುಕ್ಕಾಣಿ ಹಿಡಿದಿರುವುದು ನಮಗೆ ಹೆಮ್ಮೆಯಾದರೂ, ತಿರುಗುತ್ತಿರುವ ಕಾಲಚಕ್ರವನ್ನು ಹಿಂದೆ ಸರಿಸಿ ನೋಡಿದಾಗಇದೇಆಂಗ್ಲರುವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದಿದ್ದು ಇತಿಹಾಸ. ಸ್ಥಳೀಯ ಆಡಳಿತದ ಮೇಲೆ ತಮ್ಮ ಹತೋಟಿಯನ್ನು ಸಾಧಿಸಿ ಇಡೀ ದೇಶವನ್ನೇಆಳಿದರು.ಬರುವಾಗಅವರು ಅಲ್ಲಿಂದಸೈನ್ಯವನ್ನುತಂದಿರಲಿಲ್ಲಆದರೆ ತಮ್ಮ ಒಡೆದಾಳುವ ನೀತಿ (ಊತುಜಜ & ಖಣಟಜ)ಯಿಂದಾಗಿ ಸ್ಥಳೀಯರಲ್ಲಿ ವಿಷದ ಬೀಜವನ್ನು ಬಿತ್ತಿದ್ದರು. ಪರಿಣಾಮವಾಗಿ ಶತಮಾನಗಳ ಕಾಲ ನಿರಾತಂಕವಾಗಿ ಇಲ್ಲಿನ ಸಂಪತ್ತನ್ನು ಲೂಟಿಗೈದರು. ಇವರ ಕ್ರೌರ್ಯದ ವಿರುದ್ಧ ಜನರಲ್ಲಿ ಸ್ವಾತಂತ್ರ್ಯದ ಕಿಚ್ಚು ಚಿಗುರೊಡೆದಾಗ ಅದನ್ನು ದಮನಿಸಲು ಅನೇಕ ಕಾಯಿದೆಗಳನ್ನು ಜಾರಿಗೆ ತಂದರು. ಅದರಲ್ಲಿ ರೌಲತ್ ಕಾಯಿದೆಯು ಸಹ ಒಂದು. ಈ ಕಾಯಿದೆಯವಿರುದ್ಧಜಲಿಯನ್‌ವಾಲಾ ಬಾಗ್ ನಲ್ಲಿ ಜನರು ಶಾಂತಿಯುತವಾಗಿ ಪ್ರತಿಭಟನೆಯಲ್ಲಿ ತೊಡಗಿದಾಗ, ಅವರ ಮೇಲೆ ಗುಂಡಿನ ಸುರಿಮಳೆಗೈದರು. ಪ್ರತಿಭಟನೆಗಾರರನ್ನು, ಮಹಿಳೆಯರು, ಮಕ್ಕಳು ಮತ್ತು ಅಮಾಯಕರನ್ನು ಎಲ್ಲೆಂದರಲ್ಲಿ ಹೊಡೆದುರುಳಿಸಿದರು. ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ ದುರಂತ ಭಾರತದ ಆಧುನಿಕ ಇತಿಹಾಸದಲ್ಲಿ ಹೊಸ ಪರ್ವಕ್ಕೆ ನಾಂದಿ ಹಾಡಿತು.ಈದುರಂತದಪರಿಣಾಮವಾಗಿ ಸ್ವಾತಂತ್ರ್ಯದಕಿಡಿಎಲ್ಲೆಡೆಗೂವ್ಯಾಪಿಸಲು ಪ್ರೇರಣೆಯಾಯಿತು.

**ಅಂದು ನಡೆದದ್ದಾದರೂ ಏನು?**

ಪ್ರತಿವರ್ಷ ಏಪ್ರಿಲ್ 13 ರಂದು ಪಂಜಾಬಿನಲ್ಲಿ ಬೈಸಾಖಿ ಹಬ್ಬ ಅಂದರೆ ಹೊಸ ವರುಷವನ್ನು ಆಚರಿಸುತ್ತಾರೆ. ಸಿಖ್ ಸಮುದಾಯದ ಎಲ್ಲರೂ ಸೇರಿ ಸ್ವರ್ಣ ಮಂದಿರದಲ್ಲಿ ಪೂಜೆ ಮುಗಿಸಿಕೊಂಡು ನಂತರ ಜಲಿಯನ್ ವಾಲಾ ಉದ್ಯಾನದಲ್ಲಿ ಆಯೋಜಿಸುವ ಜಾತ್ರೆಯಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ರೂಢಿಯಲ್ಲಿದೆ. ಅಂದು 13 ಏಪ್ರಿಲ್ 1919 ಬೈಸಾಖಿ ಹಬ್ಬದ ದಿನ. ದೂರದ ಊರುಗಳಿಂದ ವ್ಯಾಪಾರಿಗಳು, ಜಾನುವಾರು ಮಾರಾಟಗಾರರು, ಮಂದಿರದಲ್ಲಿಪೂಜೆಮಾಡಿಸಿಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಜನ ಸಾಮಾನ್ಯರು, ಮಹಿಳೆಯರು, ಯುವಕರು, ಮಕ್ಕಳು ಮತ್ತುವೃದ್ಧರುಎಲ್ಲರೂಅಲ್ಲಿಸೇರಿದ್ದರು. ಆಂಗ್ಲರು ಜಾರಿಗೆ ತಂದ ಹೊಸ ರೌಲತ್ ಕಾಯಿದೆಯ ವಿರುದ್ಧ ಪ್ರತಿಭಟನೆ ನಡೆಯುತ್ತದೆ ಎನ್ನುವ ಮಾಹಿತಿಯ ಮೇರೆಗೆ ಬ್ರಿಟಿಷ್ ಆಡಳಿತವು ಬೈಸಾಖಿ ಜಾತ್ರೆಯನ್ನು ತಡೆ ಹಿಡಿಯಿತು. ಸಂಜೆ ಸುಮಾರು 5.30ಕ್ಕೆ ಜಲಿಯನ್ ವಾಲಾ ಬಾಗ್‌ಎಂಬತೆರೆದಜಾಗದಲ್ಲಿಸ್ವಾತಂತ್ರ್ಯ ಹೋರಾಟಗಾರರಾದ ಸೈಫುದ್ದೀನ್ ಕಿಚ್ಲೆವ್ ಮತ್ತು ಡಾ. ಸತ್ಯ ಪಾಲ್ ಅವರ ಬಂಧನದ ವಿರುದ್ಧ ಹಾಗು ರೌಲತ್ ಕಾಯಿದೆಯ ವಿರುದ್ಧ ಶಾಂತಿಯುತ ಪ್ರತಿಭಟನೆಗೆ ಬೈಸಾಖಿ ಜಾತ್ರೆಯಲ್ಲಿ ಜನ ಮುಂದಾದರು. ಪ್ರತಿಭಟನೆಯ ಮಾಹಿತಿ ಖಚಿತ ಪಡಿಸಿಕೊಂಡ ಕರ್ನಲ್ ಆರ್.ಇ.ಹೆಚ್. ಡೈಯರ್ ಸೈನಿಕರ ಗುಂಪಿನೊಂದಿಗೆ ಜಲಿಯನ್ ವಾಲಾಬಾಗ್ ಗೆ ಬಂದರು. ಎಲ್ಲಾ ಐವತ್ತು ಮಂದಿ 303 ಲೀ-ಎನ್ಫೀಲ್ಡ್ ಬೋಲ್ಟ್-ಆಕ್ಷನ್ ರೈಫಲ್ಗಳಿಂದ ಶಸ್ತ್ರಾಸ್ತ್ರ ಸಜ್ಜಿತರಾಗಿದ್ದರು. ಅವರು ಮೆಷಿನ್ ಗನ್ಗಳಿಂದ ಶಸ್ತ್ರಸಜ್ಜಿತವಾದ ಎರಡು ಕಾರುಗಳನ್ನೂ ಸಹ ತಂದಿದ್ದರು. ಆದಾಗ್ಯೂ, ಕಿರಿದಾದ ಪ್ರವೇಶದ್ವಾರಗಳ ಮೂಲಕ ವಾಹನಗಳು ಕಾಂಪೌಂಡ್ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಜಲಿಯನ್ ವಾಲಾ ಬಾಗ್ ನ ಮೂರು ಬದಿಗಳುಕಟ್ಟಡದಿಂದಆವೃತ್ತವಾಗಿದ್ದು, ಒಂದು ಕಡೆಯಿಂದ ಮಾತ್ರ ಜನ ನಿರ್ಗಮಿಸಲು ಜಾಗವಿತ್ತು. ಅಲ್ಲಿ ತನ್ನ ಸೇನಾ ಪಡೆಗಳೊಂದಿಗೆ ತಡೆ ಹಿಡಿದ ಆಂಗ್ಲ ಅಧಿಕಾರಿ ಹೊರಗೆ ಹೋಗಲು ಇದ್ದಂತಹ ಒಂದೇ ಒಂದು ದ್ವಾರದ ಬಳಿ ತನಗೆ ನಿಷ್ಠರಾದ ಬ್ರಿಟಿಷ್ ಭಾರತೀಯ ಸೇನೆಯಗೂರ್ಖಾಮತ್ತುಸಿಖ್‌ಪದಾತಿ ದಳಗಳೊಂದಿಗೆಅಲ್ಲಿಸೇರಿದ್ದ ಜನರನ್ನು ಸುತ್ತುವರೆದು, ಅವರಿಗೆ ಅಲ್ಲಿಂದ ಹೊರಹೋಗಲು ಸಹ ಬಿಡದೇ, ಏಕಾಏಕಿ ಗುಂಡಿನ ಸುರಿಮಳೆಗೈದರು. ಓಡಲು ಪ್ರಯತ್ನಿಸಿದವರ ಮೇಲೆಯೂ ಗುಂಡುಗಳನ್ನು ಹಾರಿಸಿದರು. ತಾವು ತಂದಿದ್ದ ಮದ್ದು ಗುಂಡು ಖಾಲಿಯಾಗುವವರೆಗೂ ಪ್ರತಿಭಟನಾಕಾರರ ಮೇಲೆ ಗುಂಡಿನ ಆಕ್ರಮಣ ಮಾಡಿದರು. ಸಾವಿರಾರು ಜನ ಕೊಲ್ಲಲ್ಪಟ್ಟರು. ನೂರಾರು ಜನ ಅಂಗಾಂಗಗಳನ್ನು ಕಳೆದುಕೊಂಡರು. ಲೆಕ್ಕವಿಲ್ಲದಷ್ಟು ಜನರು ಗಾಯಗೊಂಡರು. ಅಂದು ನಡೆದ ಈ ಪ್ರಕರಣವನ್ನು "ಜಲಿಯನ್ವಾಲಾ ಬಾಗ್ ಹತ್ಯಾಕಾಂಡ" ಅಥವಾ ಅಮೃತಸರ ಹತ್ಯಾಕಾಂಡ ಎಂದು ಕರೆಯುತ್ತಾರೆ. ಇಂದಿನವರೆಗೂಸಾವುನೋವಿನನಿಖರ ಮಾಹಿತಿದೊರೆತಿಲ್ಲ.ಈಹತ್ಯಾಕಾಂಡದ ಪರಿಣಾಮವಾಗಿ ಸಾರ್ವಜನಿಕರಲ್ಲಿ ಬ್ರಿಟಿಷ್ ರ ವಿರುದ್ಧ ಕೋಪ ಹೆಚ್ಚಾಯಿತು. ಬ್ರಿಟಿಷ್ ಕಾರ್ಯದರ್ಶಿ ವಿನ್ಸ್ಟನ್ ಚರ್ಚಿಲ್ ಈ ದಾಳಿಯನ್ನು "ಹೇಳಲಾಗದಷ್ಟು ದೈತ್ಯಾಕಾರದ" ದಾಳಿಯೆಂದು ಖಂಡಿಸಿದರು. ಆದರೆ ಯಾವುದೇ ಪ್ರಯೋಜನವಾಗಲಿಲ್ಲ.

ಜಲಿಯನ್ ವಾಲಾ ಬಾಗ್ ಉದ್ಯಾನ ವನವು ಹೇಗಿತ್ತು ಗೊತ್ತಾ. ಇದು ಆರರಿಂದ ಏಳು ಎಕರೆಗಳಷ್ಟು ತೆರೆದ ಪ್ರದೇಶವಾಗಿತ್ತು. ಸರಿಸುಮಾರು 200 ಗಜಗಳಷ್ಟು ಗಾತ್ರದಲ್ಲಿ ಮತ್ತು ಸರಿಸುಮಾರು 10 ಅಡಿ ಎತ್ತರದ ಗೋಡೆಗಳಿಂದ ಎಲ್ಲಾ ಕಡೆಗಳಲ್ಲಿ ಸುತ್ತುವರಿದಿದೆ. ಮಳೆಗಾಲದಲ್ಲಿ ಇಲ್ಲಿ ಬೆಳೆ ಬೆಳೆಯುತ್ತಿದ್ದರೂ, ವರ್ಷದ ಉಳಿದ ಭಾಗಗಳಲ್ಲಿ ಇದು ಸ್ಥಳಿಯ ಸಭಾ ಮಂಟಪವಾಗಿ ಮತ್ತು ಮನೋರಂಜನಾ ಪ್ರದೇಶವಾಗಿ ಕಾರ್ಯನಿರ್ವಹಿಸುತಿತ್ತು. ಬಾಗ್ನ ಮಧ್ಯಭಾಗದಲ್ಲಿಒಂದುಸಮಾಧಿಯಿದ್ದು ಹಾಗೆಯೇ ಸುಮಾರು 20 ಅಡಿಗಳಷ್ಟು ವ್ಯಾಸವನ್ನು ಹೊಂದಿರುವ ಭಾಗಶಃ ನೀರಿನಿಂದ ತುಂಬಿದ ದೊಡ್ಡ ಬಾವಿ ಇತ್ತು. ಸಾರ್ವಜನಿಕರು ಸ್ವರ್ಣ ಮಂದಿರದಲ್ಲಿ ಪೂಜೆ ಸಲ್ಲಿಸಿ ಮನೆಗೆ ಹೋಗುವಾಗ ಈ ಬಾಗ್ ಮೂಲಕ ಹಾದು ಹೋಗುತ್ತಿದ್ದರು. ಬೈಸಾಖಿ ಸಮಯದಲ್ಲೇ ಅಲ್ಲಿ ಜಾನುವಾರು ಜಾತ್ರೆ ಕೂಡ ನಡೆಯುತ್ತಿತ್ತು. ಜಲಿಯನ್ ವಾಲಾಬಾಗ್ ದುರಂತ ಸಿಖ್ ಸಮುದಾಯದ ಜನರ ನಂಬಿಕೆ ಮತ್ತು ಆಚರಣೆಯ ಮೇಲೆ ನಡೆಸಿದ ದಾಳಿಯೆಂದುಅವರುಮನನೊಂದರು. ಮರುದಿನ ಡೈಯರ್ ಒಂದು ಹೇಳಿಕೆ ನೀಡುತ್ತಾರೆ. "200 ರಿಂದ 300 ಜನ ಕೊಲ್ಲಲ್ಪಟ್ಟರು. ನನ್ನ ಪಕ್ಷವು 1,650 ಸುತ್ತು ಗುಂಡು ಹಾರಿಸಿತು. ಗುಂಡಿನ ದಾಳಿಯಿಂದ ನೇರವಾಗಿ ಸಂಭವಿಸಿದ ಅನೇಕ ಸಾವುಗಳ ಹೊರತಾಗಿ, ಕಿರಿದಾದ ಗೇಟ್ಗಳಲ್ಲಿ ನೂಕುನುಗ್ಗಲು ಅಥವಾ ಗುಂಡಿನ ದಾಳಿಯಿಂದ ತಪ್ಪಿಸಿಕೊಳ್ಳಲು ಕಾಂಪೌಂಡ್ನಲ್ಲಿರುವ ಒಂಟಿಬಾವಿಗೆಹಾರಿಹಲವಾರುಜನರು ಸಾವನ್ನಪ್ಪಿದರು.. ಡೈಯರ್ ಸಾಮಾನ್ಯ ಸಮಯಕ್ಕಿಂತ ಮುಂಚಿತವಾಗಿ ಅಂದು ಕರ್ಫ್ಯೂ ಸಮಯವನ್ನು ವಿಧಿಸಿದ್ದರು. ಪರಿಣಾಮವಾಗಿ, ಗಾಯಾಳುಗಳನ್ನು ಅವರು ಬಿದ್ದ ಸ್ಥಳದಿಂದ ಬೇರೆ ಕಡೆ ಕರೆದುಕೊಂಡು ಹೋಗಲು ಸಾಧ್ಯವಾಗಲಿಲ್ಲ. ಅವರಲ್ಲಿ ಹಲವರು ತಮ್ಮ ಗಾಯಗಳಿಗೆ ಚಿಕಿತ್ಸೆ ದೊರೆಯದ ಕಾರಣಅಲ್ಲಿಯೇರಾತ್ರಿಸಾವನ್ನಪ್ಪಿದ್ದರು. ಒಟ್ಟು ಸಾವು ನೋವುಗಳ ಸಂಖ್ಯೆಯು ವಿವಾದಾಸ್ಪದವಾಗಿದೆ. ಸ್ವಾತಂತ್ರ್ಯದ ನಂತರ ಈ ಸ್ಥಳದಲ್ಲಿ ಇರಿಸಲಾದ ಫಲಕವು ಬಾವಿಯಿಂದ 120 ದೇಹಗಳನ್ನು ತೆಗೆಯಲಾಗಿದೆಯೆಂದು ಮಾಹಿತಿಯನ್ನು ನೀಡುತ್ತದೆ. ಗುಂಡಿನ ಗುರುತುಗಳು ಗೋಡೆಗಳು ಮತ್ತು ಅಕ್ಕಪಕ್ಕದ ಕಟ್ಟಡಗಳ ಮೇಲೆ ಇಂದಿಗೂ ಉಳಿದಿವೆ. ಗುಂಡುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅನೇಕ ಜನರು ಹಾರಿ ಮುಳುಗಿದ ಬಾವಿಯು ಉದ್ಯಾನದೊಳಗಿನ ಸಂರಕ್ಷಿತ ಸ್ಮಾರಕವಾಗಿದೆ. ಭಾರತೀಯ ರಾಷ್ಟ್ರೀಯತಾವಾದಿ ಸ್ವಾಮಿ ಶ್ರದ್ಧಾನಂದರು ಈ ಘಟನೆಯಲ್ಲಿ 1500 ಜನರು ಸಾವನ್ನಪ್ಪಿದರು ಎಂದು ಗಾಂಧೀಜೀ ಗೆ ಪತ್ರ ಬರೆದಿದ್ದರು ಎಂಬ ಮಾಹಿತಿಯಿದೆ. ಬ್ರಿಟಿಷ್ ಸರ್ಕಾರವು ಹತ್ಯಾಕಾಂಡದ ಮಾಹಿತಿಯನ್ನು ನಿಗ್ರಹಿಸಲು ಪ್ರಯತ್ನಿಸಿತು. ಆದರೆ ದೇಶಾದ್ಯಂತ ಸುದ್ದಿ ಹರಡಿತು ಮತ್ತು ವ್ಯಾಪಕ ಆಕ್ರೋಶವು ಉಂಟಾಯಿತು. ಹತ್ಯಾಕಾಂಡದ ವಿವರಗಳು ಡಿಸೆಂಬರ್ 1919 ರವರೆಗೆ ಬ್ರಿಟನ್ನಿನ ಮೇಲಾಧಿಕಾರಿಗಳಿಗೂ ತಿಳಿದಿರಲಿಲ್ಲ. 12 ಅಕ್ಟೋಬರ್ 1920 ರಂದು, ಅಮೃತಸರ ಖಾಲ್ಸಾ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ರಾಷ್ಟ್ರೀಯ ಚಳುವಳಿಯನ್ನು ಬಲಪಡಿಸಲು ಸಭೆಯನ್ನು ಕರೆದರು. ವಿದ್ಯಾರ್ಥಿಗಳು ಬ್ರಿಟಿಷ್ ವಿರೋಧಿ ಆಂದೋಲನಕ್ಕೆ ಮುಂದಾದರು. ಇದರ ಪರಿಣಾಮವಾಗಿ 15 ನವೆಂಬರ್ 1920 ರಂದು ಸಿಖ್ ದೇವಾಲಯಗಳಲ್ಲಿ ಸುಧಾರಣೆಗಳನ್ನುನಿರ್ವಹಿಸಲುಮತ್ತು ಕಾರ್ಯಗತಗೊಳಿಸಲು ಶಿರೋಮಣಿ ಗುರುದ್ವಾರ ಪ್ರಬಂಧಕ್ ಸಮಿತಿಯನ್ನು ರಚಿಸಿಕೊಂಡರು.




ಈ ಹತ್ಯಾಕಾಂಡ 1920 ರಿಂದ 22ರ ಅಸಹಕಾರ ಚಳುವಳಿಗೆ ಕಾರಣವಾಯಿತು. ಇದು ಭಾರತದಲ್ಲಿ ಬ್ರಿಟಿಷ್ ರ ಆಳ್ವಿಕೆಯ ಅಂತ್ಯಕ್ಕೆ ನಾಂದಿ ಹಾಡಿತು. ಕ್ರಿಯೆಯ ಉದ್ದೇಶವು "ಸಭೆಯನ್ನು ಚದುರಿಸುವುದು ಅಲ್ಲ, ಆದರೆ ಅಸಹಕಾರಕ್ಕಾಗಿ ಭಾರತೀಯರನ್ನುಶಿಕ್ಷಿಸುವುದು"ಎಂದು ಆಂಗ್ಲರು ಹೇಳಿಕೆ ನೀಡಿದ್ದರು. ಅಂದು ಅಲ್ಲಿ ಹತ್ತರಿಂದ ಇಪ್ಪತ್ತು ಸಾವಿರ ಜನರ ಗುಂಪು ಸೇರಿತ್ತು ಎಂದು ಹಂಟರ್ ಕಮಿಷನ್ ಅಂದಾಜಿಸಿದೆ.

ಈಘಟನೆಯುಅನೇಕಮಧ್ಯಮವರ್ಗದ ಭಾರತೀಯರುಬ್ರಿಟಿಷರಿಗೆತಮ್ಮಹಿಂದಿನ ನಿಷ್ಠೆಯನ್ನು ತ್ಯಜಿಸಲು ಮತ್ತು ಬ್ರಿಟಿಷ್ ಆಡಳಿತದ ಬಗ್ಗೆ ಅಪನಂಬಿಕೆಯನ್ನು ಹೊಂದಿ ರಾಷ್ಟ್ರೀಯವಾದಿಗಳಾಗಲು ಕಾರಣವಾಯಿತು. ಜಲಿಯನ್ ವಾಲಾ ಬಾಗ್ ನಲ್ಲಿ ಅಮಾಯಕ ಸಿಖ್ ಸಮುದಾಯದ ಮೇಲೆ ಆಂಗ್ಲರು ನಡೆಸಿದ ಮಾರಣಹೋಮದ ರಕ್ತದ ಕಲೆಗಳು, ಸಿಖ್ ಸಮುದಾಯದ ಚಿಕ್ಕ ಚಿಕ್ಕ ಬಾಲಕರಲ್ಲೂ ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಹಬ್ಬಿಸಿತು. ಈ ಹತ್ಯಾಕಾಂಡ ಯುವಜನತೆಯ ಮನಸ್ಸಿನಲ್ಲಿ ಹೋರಾಟದ ಚಿತ್ತಾರ ಮೂಡಿಸಿತ್ತು. ಪರಿಣಾಮವಾಗಿ ಭಗತ್ ಸಿಂಗ್, ಸುಖದೇವ್ ಮುಂತಾದ ಬಾಲಕರು ಪಂಜಾಬಿನ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೇರೇಪಿಸಿ, ಸಾವಿಗೇ ಸವಾಲು ಹಾಕುವಂತಹ ಗುಣವನ್ನು ಮೈಗೂಡುವಂತೆ ಮಾಡಿತ್ತು. ಕೇವಲ ಸಿಖ್ ಸಮುದಾಯದವರು ಮಾತ್ರವಲ್ಲದೆ ಇಡಿ ದೇಶದ ಸಾಮಾನ್ಯ ನಾಗರಿಕರು ಸೇರಿದಂತೆ, ಮಕ್ಕಳು ಮತ್ತು ಮಹಿಳೆಯರು ಸಹ ಬ್ರಿಟಿಷ್ ಆಡಳಿತದ ವಿರುದ್ಧಸೆಡ್ಡುಹೊಡೆಯಲುಗುಪ್ತಸ್ಥಳದಲ್ಲಿ ಸೇರಿ ರಾಷ್ಟ್ರೀಯ ಆಂದೋಲನಗಳನ್ನು ಆಯೋಜಿಸಿದರು. ಬ್ರಿಟಿಷ್ ಸರ್ಕಾರದ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಈ ದುರಂತ ನಡೆದು ಇಂದಿಗೆ 105 ವರ್ಷಗಳಾದವು. ಅಂದು ತಮ್ಮ ಪ್ರಾಣವನ್ನು ನೀಡಿದ ಪ್ರತಿಭಟನೆಕಾರರು, ಅಮಾಯಕರು, ವೃದ್ಧರು, ಮಹಿಳೆಯರು ಮತ್ತು ಮಕ್ಕಳಿಗೆಲ್ಲಭಾವಪೂರ್ಣನಮನವನ್ನು ಸಲ್ಲಿಸೋಣವೇ...

ಕೊನೆಯ ಗುಟುಕು ಜಲಿಯನ್ ವಾಲಾಬಾಗ್ ದುರಂತ ಜನರಲ್ಲಿ ರಾಷ್ಟ್ರೀಯತೆಯ ನವ ಪರ್ವಕ್ಕೆ ಮುನ್ನುಡಿ ಬರೆಯಿತು. ಅನೇಕರ ಬಲಿದಾನದಿಂದ ನಾವು ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ನಮ್ಮ ದೇಶ ಸ್ವಾಯತ್ತವಾಗಿದ್ದರೆ ಮಾತ್ರ ನಮ್ಮ ಮಾನ, ಮರ್ಯಾದೆ, ಹೆಣ್ಣು, ಹೊನ್ನು, ಮಣ್ಣು ಎಲ್ಲವೂ ಸುರಕ್ಷಿತವಾಗಿರುತ್ತದೆ. ಸ್ವಾತಂತ್ರ್ಯವೇ ಇಲ್ಲದೇ ಪರಾತಂತ್ರ ಅಥವಾ ಅತಂತ್ರವಾದಾಗ ನಮ್ಮನ್ನು ಯಾರು ಬೇಕಾದರೂ ಬಂದು ತುಳಿಯುತ್ತಾರೆ. ಹಿಂದೆ ಆಂಗ್ಲರು ಬಂದು ಒಡಕನ್ನು ಮೂಡಿಸಿ ಅವರ ಬೇಳೆಯನ್ನು ಬೇಯಿಸಿಕೊಂಡರು. ನಾವು ಹೀಗೆಯೇ ಆಂತರಿಕ ಭೇಧಭಾವ, ಒಳಕಿತ್ತಾಟ, ಕುರ್ಚಿಗಾಗಿ ಜಗಳವಾಡುತ್ತಿದ್ದರೆ ಮುಂದೊಂದು ದಿನ ಮತ್ತೊರ್ವ ವಿದೇಶಿಯರು ಹಕ್ಕು ಜಮಾಯಿಸಬಹುದು. ನಮ್ಮಲ್ಲಿರುವ ಮತದಾನ ಎಂಬ ಬ್ರಹ್ಮಾಸ್ತ್ರವನ್ನು ಸರಿಯಾಗಿ ಚಲಾಯಿಸೋಣ. ರಾಷ್ಟ್ರಕ್ಕೆ ಸಮರ್ಥನಾದ, ಬಲಿಷ್ಠನಾದ, ತೀಕ್ಷ್ಣಮತಿ ಮತ್ತು ಕೆಚ್ಚೆದೆಯ ಗುಂಡಿಗೆಯನ್ನು ಹೊಂದಿರುವ ನಾಯಕನಿಗೆ ಆಡಳಿತದ ಚುಕ್ಕಾಣಿ ನೀಡೋಣ. ಇಂದು ಆಸ್ವಾಧಿಸುತ್ತಿರುವ ಸ್ವಾತಂತ್ರ್ಯ ಮತ್ತು ಸುರಕ್ಷತೆ ಶತಶತಮಾನಗಳವರೆಗೆ ಇರಲಿಯೆಂಬ ಸದಾಶಯ. ವಂದೇ ಮಾತರಂ...

◆ ಲತಾ ಕೆ.ಎಸ್.ಹೆಗಡೆ
ಬೆಂಗಳೂರು

## ದಾನಿಗೊಂಡ ಸಂಸ್ಥೆಯಲ್ಲಿ ಶಿಷ್ಯವೇತನಕ್ಕಾಗಿ ಪರೀಕ್ಷೆ

# ರಾಜ್ಯದ ವಿವಿಧ ಜಿಲ್ಲೆಗಳಿಂದ 1800 ವಿದ್ಯಾರ್ಥಿಗಳು ಭಾಗಿ




**ತೇರದಾಳ:**ಎಷ್ಟುಶಿಕ್ಷಣಕಲಿತಿದ್ದೇವೆ ಅನ್ನುವುದು ಎಷ್ಟು ಮುಖ್ಯಮೋ ಎಂತಹ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿದ್ದೇವೆ ಎಂಬುದು ಕೂಡ ಅಷ್ಟೇ ಮುಖ್ಯವಾಗುತ್ತದೆ. ಆದ್ದರಿಂದ ಯಾವ ಶಿಕ್ಷಣ ಪಡೆಯಬೇಕು ಎನ್ನುವುದರ ಜತೆಗೆ ಯಾವ ಶಿಕ್ಷಣ ಸಂಸ್ಥೆ ಆಯ್ಕೆ ಮಾಡಿಕೊಳ್ಳಬೇಕೆಂಬ ಪರಿಕಲ್ಪನೆ ವಿದ್ಯಾರ್ಥಿಗಳಲ್ಲಿ ಹಾಗೂ ಪಾಲಕರಲ್ಲಿ ಅಗತ್ಯವಾಗಿದೆ ಎಂದು ಮಂಗಳೂರಿನ ಸೌಮ್ಯಶ್ರೀ ಬಂಗೇರ ಹೇಳಿದರು.

ಇಲ್ಲಿನ ಪ್ರತಿಷ್ಠಿತ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ದಾನಿಗೊಂಡ ಪಿಯು ವಿಜ್ಞಾನ ಕಾಲೇಜ್ 2023–24ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಇದೇ ಮೊದಲ ಬಾರಿಗೆ ಶನಿವಾರ ಹಮ್ಮಿಕೊಂಡಿದ್ದ ಶಿಷ್ಯವೇತನಕ್ಕಾಗಿ ಪರೀಕ್ಷೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವ ಮೂಲಕ ಉತ್ತರ ಕರ್ನಾಟಕದಲ್ಲಿ ದಾನಿಗೊಂಡ ಸಂಸ್ಥೆ ಶೈಕ್ಷಣಿಕವಾಗಿ ಹೊಸ ಅಧ್ಯಾಯ ಬರೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಳಗಾವಿ ಮೂಡಲಗಿ ಬಿಇಒ ಅಜೀತ ಮನ್ನಿಕೇರಿ, ಉನ್ನತ ಶಿಕ್ಷಣ ಪಡೆಯುವುದಕ್ಕಿಂತ ಗುಣಮಟ್ಟದ ಶಿಕ್ಷಣಕ್ಕೆ ಪಾಲಕರು ಆದ್ಯತೆ ನೀಡಬೇಕು. ಆ ದಿಸೆಯಲ್ಲಿ ದಾನಿಗೊಂಡ ಸಂಸ್ಥೆ ಕಾರ್ಯ ಶ್ಲಾಘನೀಯ ಎಂದು ಬಣ್ಣಿಸಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಚೇರಮನ್ ಡಾ. ಮಹಾವೀರ ದಾನಿಗೊಂಡ, ನಮ್ಮ ಭಾಗದ ಮಕ್ಕಳು ಬೇರೆ ಕಡೆಗೆ ಶಿಕ್ಷಣ ಕಲಿಯಲು ಹೋಗುವುದಕ್ಕಿಂತ ಅಂತಹ ಸಂಸ್ಥೆಗಳನ್ನು ನಮ್ಮಲ್ಲಿಯೇ ಏಕೆ ಪ್ರಾರಂಭಿಸಬಾರದು ಎಂದು ತೇರದಾಳದಲ್ಲಿ ಶಿಕ್ಷಣ ಸಂಸ್ಥೆಗಳನ್ನುಹುಟ್ಟುಹಾಕಲಾಗಿದೆ. ಬಡ ಪ್ರತಿಭಾವಂತ ಮಕ್ಕಳಿಗೆ ಶಿಕ್ಷಣ ಪಡೆಯಲು ಅನುಕೂಲ ಆಗಲಿ ಎಂದು ಶಿಷ್ಯ ವೇತನ ಪರೀಕ್ಷೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ, ಪ್ರಾಚಾರ್ಯರಾದ ಸಂತೋಷ ಕೃಷ್ಣಾಪುರೆ, ದಬ್ಬುಅಬ್ದುಲ್ ರಸೂಲ್, ಯ್ಯೂಟೂಬ್ ಖ್ಯಾತೀಯ ನಾಗರಾಜ ಸಿಂಗಾಡಿ, ಆಡಳಿತಾಧಿಕಾರಿ ರಾಜೇಂದ್ರ ಪರೀಟ ಮತ್ತಿತರಿದ್ದರು.

ರಿತೀಶಮುನ್ನೊಳಿಪ್ರಥಮ–ಬೆಳಗ್ಗೆ ನಡೆದ 100 ಅಂಕದ ಬಹು ಆಯ್ಕೆ ಪರೀಕ್ಷೆಯಲ್ಲಿ ರಿತೀಶ ಮುನ್ನೊಳಿ ಪ್ರಥಮ ಸ್ಥಾನ ಪಡೆದರು. ತನು ಕರಲಟ್ಟಿ, ಸುಪೀಯಾ, ಶ್ರೇಯಾ ಹುಲ್ಲೊಳಿ ದ್ವಿತೀಯ ಹಾಗೂ ಸೈಯದ, ಪವಿತ್ರಾ ಮಠದ, ಸೌರಭ ಗಬಸಾವಳಗಿ ತೃತೀಯ ಸ್ಥಾನ ಪಡೆದುಕೊಂಡರು. 50ನೇ ರ್‍ಯಾಂಕ್ ವರೆಗೆ ಶಿಷ್ಯವೇತನ ನೀಡಲಾಗುತ್ತಿದೆ. ಬಾಗಲಕೋಟೆ, ವಿಜಯಪುರ, ಬೆಳಗಾವಿ, ರಾಯಚೂರ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸುಮಾರು 1800 ವಿದ್ಯಾರ್ಥಿಗಳು ಪರೀಕ್ಷೆಗೆ ಆಗಮಿಸಿದ್ದು ವಿಶೇಷವಾಗಿತ್ತು.

# ಶ್ರೀ ಶಿವಬೋಧರಂಗ ಪದವಿ ಪೂರ್ವಕಾಲೇಜಿಗೆಉತ್ತಮ ಫಲಿತಾಂಶ



**ಮೂಡಲಗಿ :** ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಶ್ರೀ ಶಿವಬೋಧರಂಗ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಾರ್ಷಿಕ ಫಲಿತಾಂಶವುಶೇಕಡಾಶೇ.75ರಷ್ಟುಹೊಂದಿದೆಎಂದು ಕಾಲೇಜಿ ಪ್ರಾಚಾರ್ಯ ಪ್ರೊ.ಎಮ್.ಎಸ್.ಪಾಟೀಲ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಕಾಲೇಜಿಗೆ ಕಲಾ ವಿಭಾಗದಲ್ಲಿ ಸರಸ್ವತಿ ಮನ್ನಿಕೇರಿ ಶೇ.93.83 ಪ್ರಥಮ, ಸೇವಂತಿ ಭಾಗ್ನೋಳ ಶೇ.93.50 ದ್ವಿತೀಯ, ಸಂಪಿತ್ತಾಅಲಕನ್ನೂರ ಶೇ.92.83 ತೃತೀಯ, ವಾಣಿಜ್ಯ ವಿಭಾಗದಲ್ಲಿ ಯಲ್ಲಪ್ಪ ಹಳಬರ ಶೇ.91.06 ಪ್ರಥಮ, ಹನಮಂತ ಬೆಳವಿ ಶೇ.90.83 ದ್ವಿತೀಯ, ಗಂಗಪ್ಪ ಹ್ಯಾಗಾಡಿ ಶೇ.89.05 ತೃತೀಯ, ವಿಜ್ಞಾನ ವಿಭಾಗದಲ್ಲಿಇರ್ಫಾನ ಗದ್ಯಾಳ ಶೇ.94 ಪ್ರಥ–ಮ, ಪ್ರಭಾವತಿಇಂಡಿ ಶೇ.92.16 ದ್ವಿತೀಯ, ಭಾಗ್ಯಶ್ರೀ ಕೇರಿಗೌಡ ಶೇ.91.83 ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. 39 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 145ವಿದ್ಯಾರ್ತಿಗಳುಪ್ರಥಮಶ್ರೇಣಿಮತ್ತು54ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿಉತ್ತೀರ್ಣರಾಗಿದ್ದಾರೆ. ಎಲ್ಲ ವಿದ್ಯಾರ್ಥಿಗಳನ್ನು ಸಂಸ್ಥೆಯ ಚೇರಮನ ವೆಂಕಟೇಶ ಆರ್.ಸೋನವಾಲ್ಕರ್, ವ್ಹಾ.ಚೇರಮನ ರವೀಂದ್ರ ಪಿ.ಸೋನವಾಲ್ಕರ್ ಹಾಗೂ ಆಡಳಿತ ನಿರ್ದೇಶಕರು, ಪ್ರಾಚಾರ್ಯ ಪ್ರೊ. ಎಮ್.ಎಸ್.ಪಾಟೀಲ, ಉಪನ್ಯಾಸಕಮತ್ತುಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಸಮರ್ಪಕ ನೀರು ಪೂರೈಕೆಗೆ ಬುದ್ನಿಪಿಡಿ ಮಹಿಳೆಯರ ಒತ್ತಾಯ



**ಮಹಾಲಿಂಗಪುರ:** ಸಮರ್ಪಕ ಕುಡಿಯುವ ನೀರು ಪೂರೈಸಬೇಕೆಂದು ಒತ್ತಾಯಿಸಿ ಪಟ್ಟಣದ ಬುದ್ನಿಪಿಡಿ ಬಡಾವಣೆ ಮಹಿಳೆಯರು ಖಾಲಿ ಕೊಡಗಳೊಂದಿಗೆ ಪುರಸಭೆಗೆ ಆಗಮಿಸಿ ಪ್ರತಿಭಟನೆ ನಡೆಸಿದರು. ಕಳೆದಒಂದುತಿಂಗಳಿನಿಂದನೀರಿನ ಸಮಸ್ಯೆಯಾಗಿದೆ.ಬೇಸಿಗೆಯಲ್ಲಿ ನೀರು ಸಿಗುವುದು ದುರ್ಲಭವಾಗಿದೆ.ಪುರಸಭೆ ಅಧಿಕಾರಿಗಳು ಶೀಘ್ರ ನೀರು ಪೂರೈಸಬೇಕು ಎಂದು ಮಹಿಳೆಯರು ಆಗ್ರಹಿಸಿದರು.

ಪುರಸಭೆ ಸದಸ್ಯ ಮುಸ್ತಾಕ ಚಿಕ್ಕೋಡಿ, ಮುಖಂಡ ಶಂಕರಗೌಡ ಪಾಟೀಲ ಅವರು ಪ್ರತಿಭಟನಾನಿರತ ಮಹಿಳೆಯರ ಮನವೊಲಿಸಿ ಮಾತನಾಡಿ, ಬುದ್ನಿ ಪಿಡಿ ಬಡಾವಣೆಯಲ್ಲಿ ಸಾಕಷ್ಟು ನೀರು ಸಂಗ್ರಹವಿರುವ ಒಂದು ಕೊಳವೆ ಬಾವಿ ಇದ್ದು, ಅದಕ್ಕೆ 200 ಅಡಿಇನ್ನರ್‌ಕೇಸಿಂಗ್‌ಮಾಡಿಸಿದರೆ ಬಡಾವಣೆಯ ನೀರಿನ ಸಮಸ್ಯೆ ಪರಿಹಾರವಾಗಲಿದೆ ಎಂದರು.

ಪುರಸಭೆ ವ್ಯವಸ್ಥಾಪಕ ಎಸ್. ಎನ್.ಪಾಟೀಲ ಮಾತನಾಡಿ, ಎರಡು ದಿನದಲ್ಲಿ ಬುದ್ನಿ ಪಿಡಿ ಬಡಾವಣೆಗೆ ಸಮರ್ಪಕ ನೀರು ಪೂರೈಸಲುಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ನಂತರ ಮಹಿಳೆಯರು ಪ್ರತಿಭಟನೆ ಹಿಂಪಡೆದರು. ಸುರೇಖಾ ಸೈದಾಪುರ, ಕಲ್ಲವ್ವ ನಾಯಕ, ಮಹಾದೇವಿ ಮೇಟಿ, ಸುನಂದಾ ನಾಯಕ, ಗೌರವ್ವ ಗಜ್ಯಾಗೋಳ, ಶಾಂತವ್ವ ಗಜ್ಯಾಗೋಳ, ಲಕ್ಷ್ಮಿ ಗಜ್ಯಾಗೋಳ, ಮಹಾನಂದಾ ಮೇಟಿ, ಆನಂದ ಪವಾರ, ಮಾಳಪ್ಪ ಕಪರಟ್ಟಿ, ರವಿ ನಿಲಾರಿ, ರಾಘುಕಪರಟ್ಟಿ, ಗೋಪಾಲ ನಾಯಕ, ರಾಘು ಪವಾರ, ಮಲ್ಲಿಕಾರ್ಜುನ ಸೈದಾಪುರ ಸೇ–ರಿದಂತೆ ಹಲವರು ಇದ್ದರು.

# ಪೋಲಿಸ ಹಾಗೂ ಅರೆಸೇನಾ ಪಡೆಯ ಪಥ ಸಂಚಲನ



**ಮೂಡಲಗಿ :** ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ನಗರ ಪ್ರಮುಖ ರಸ್ತೆಯಲ್ಲಿ ಶನಿವಾರ ಅರೆಸೇನಾ ಪಡೆ ಹಾಗೂ ಪೋಲಿಸ ಸಿಬ್ಬಂದಿಯಿಂದ ಪಥ ಸಂಚಲನ ನಡೆಯಿತು,

ಪಥ ಸಂಚಲನದಲ್ಲಿ ಬೈಲಹೊಂಗಲ ಉಪವಿಭಾಗಾಧಿಕಾರಿ ಹಾಗೂ ಚುನಾವಣಾಧಿಕಾರಿ ಎಫ್ ಪ್ರಭಾವತಿ. ತಹಶೀಲ್ದಾರ ಬಿ ಎಸ್ ಕಡಕಬಾಂವಿ .ಡಿ ವಾಯ್ ಎಸ್ ಪಿ ದುದಪೀರಮುಲ್ಲಾ.ಸಿ ಆಯ್ ಎಸ್ ಎಫ್ ಅಧಿಕಾರಿ ಎಚ್ ಎಲ್ ಭಾರತಿ. ಸಿ ಪಿ ಐ ಅಬ್ದುಲ್‌ವಾಜೀದ ಪಟೇಲ. ಪಿ ಎಸ್ ಐ ಗಳಾದ ಚಂದ್ರಶೇಖರ ಹೆರಕಲ್,ಜೆ ಡಿ ನರಸಿಂಹರಾಜು,ಆನಂದಕುಮಾಕ ಸಿ ಮತ್ತು ಪೋಲಿಸ ಸಿಬ್ಬಂದಿ ಎನ್ ಎಸ್ ವಡೆಯರ ಇದ್ದರು.

ಪೋಲಿಸ ಠಾಣೆಯಿಂದ ಆರಂಭವಾದ ಪಥ ಸಂಚಲನ ವಿಧ್ಯಾನಗರ.

ಅಂಬೇಡ್ಕರ್ ವೃತ್ತ.ಕಲ್ಮೇಶ್ವರ ವೃತ್ತ.ಸಂಗಪ್ಪಣ್ಣ ವೃತ್ತ.ಬಸವೇಶ್ವರ ವೃತ್ತ.ಕರೇಮ್ಮ ವೃತ್ತ ಮೂಲಕ ಚನ್ನಮ್ಮ ವೃತ್ತಗಳ ಮೂಲಕ ಸಂಚರಿಸಿತು. ಕುಲಗೋಡ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಇಂದು ಪಥ ಸಂಚಲನ ಜರುಗಿತು,

# ಸುಭದ್ರ ಭಾರತ ನಿರ್ಮಾಣಕ್ಕೆ ಮೋದಿ ಗೆಲುವು ಅವಶ್ಯಕ: ಗದ್ದಿಗೌಡರ



**ಮಹಾಲಿಂಗಪುರ :** ಪ್ರಧಾನಿ ಮೋದಿಜಿಯವರ ಸಮರ್ಥ ನೇತೃತ್ವ, ದಿಟ್ಟ ನಿರ್ಧಾರಗಳಿಂದ ಭಾರತ ಸರ್ವರಂಗಗಳಲ್ಲಿ ಹಿಂದೆಂದೂ ಕಾಣದ ಅಭಿವೃದ್ಧಿ ಕಂಡಿದೆ. ಇಡಿ ಜಗತ್ತಿನ ಮನ್ನಣೆ ಗಳಿಸಿದೆ. ಮೋದಿಯವರಿಂದ ಮಾತ್ರ ಸುಭದ್ರ ಮತ್ತು ಸಮೃದ್ಧ ಭಾರತ ನಿರ್ಮಾಣ ಸಾಧ್ಯ ಎಂದು ಭಾಗಲಕೋಟೆಯ ಬಿಜೆಪಿ ಲೋಕಸಭಾ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಹೇಳಿದರು.

ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಾಲಿಂಗಪ್ಪ ಸನದಿಯವರ ನೇತೃತ್ವದಲ್ಲಿ ಸಮೀಪದ ಸೈದಾಪುರ–ಸಮೀರವಾಡಿಯ ಶಿವಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಿದ ಲೋಕಸಭಾ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಮಮಂದಿರ ನಿರ್ಮಾಣ, 370 ಕಲಂ ರದ್ಧತಿ, ತ್ರಿವಳಿ ತಲಾಖ್ ರದ್ಧತಿ, ಸಿಎಎ, ಸರ್ಜಿಕಲ್ ದಾಳಿ ಮುಂತಾದ ನೂರಾರು ಯೋಜನೆ ಮತ್ತು ದಿಟ್ಟ ನಿರ್ಧಾರಗಳಿಂದ ಸದೃಢ ಭಾರತ ಸಾಕಾರಗೊಂಡಿದೆ.ಮುಂದೆಯೂ ಅತ್ಯಾವಶ್ಯಕ ನಿರ್ಣಯ ಕೈಗೊಂಡು ಭಾರತವನ್ನು ವಿಶ್ವಗುರುವನ್ನಾಗಿಸಲು ದೇಶಕ್ಕೆ ಮತ್ತೊಮ್ಮೆ ಮೋದಿ ಬೇಕು ಎಂದರು.

ಶಾಸಕ ಸಿದ್ದು ಸವದಿ ಮಾತನಾಡಿ ದೇಶ ಹಾಗೂ ಮುಂದಿನ ಪೀಳಿಗೆಯ ಭವಿಷ್ಯಕ್ಕಾಗಿ ಮತ್ತೊಮ್ಮೆ ಮೋದಿಜಿ ಅನಿವಾರ್ಯ,

ದೇಶ ಮೊದಲು, ನಂತರ ಪಕ್ಷ, ಆ ನಂತರ ವ್ಯಕ್ತಿ ಹೀಗಾಗಿ ದೇಶದ ಹಿತದೃಷ್ಠಿಯಿಂದ ಯಾವುದೇ ಜಾತಿ, ಮತ, ಪಂಥಗಳ ಬೇಧ ಮರೆತು ಮೋದಿ ಕೈಬಲಪಡಿಸುವ ನಿಟ್ಟಿನಲ್ಲಿ ಗದ್ದಿಗೌಡರಿಗೆ ಮತನೀಡಿ ಗೆಲ್ಲಿಸಲು ಮನವಿ ಮಾಡಿದರು.

ಮಹಾಲಿಂಗಪ್ಪ ಸನದಿ ಪ್ರಾಸ್ತಾವಿಕವಾಗಿ ಮಾತನಾಡಿ,ಕಳೆದಚುನಾವಣೆಗಳಲ್ಲಿತೇರದಾಳ ಮತಕ್ಷೇತ್ರದಲ್ಲೇ ಅತಿ ಹೆಚ್ಚು ಲೀಡಿ ಕೊಟ್ಟಿದ್ದೇವೆ. ಈ ಬಾರಿಯೂ ಅದಕ್ಕಿಂತ ಹೆಚ್ಚು ಲೀಡ್ ಕೊಡುತ್ತೇವೆ ಎಂದರು.

ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಮಾತನಾಡಿದರು. ಅಕ್ಕಮಹಾದೇವಿ ಮಹಿಳಾ ಸಂಘ ಮತ್ತು ಕಾರ್ಯಕರ್ತರ ವತಿಯಿಂದ ಗದ್ದಿಗೌಡರ ಮತ್ತು ಸವದಿಯವರನ್ನು ಸನ್ಮಾನಿಸಲಾಯಿತು.

ಬಿಜೆಪಿ ಗ್ರಾಮೀಣ ಘಟಕದ ಅಧ್ಯಕ್ಷ ಸುರೇಶ ಅಕ್ಕಿವಾಟ, ಪ್ರಧಾನ ಕಾರ್ಯದರ್ಶಿ ಆನಂದ ಕಂಪು, ತಾಪಂ ಮಾಜಿ ಅಧ್ಯಕ್ಷ ಗೌಡಪ್ಪಗೌಡ ಪಾಟೀಲ, ಪಿಕೆಪಿಎಸ್ ಅಧ್ಯಕ್ಷ ಬಸವಣ್ಣೆಪ್ಪ ಬ್ಯಾಳಿ, ಮಲ್ಲಪ್ಪ ನಾಯಕ, ಮುರಿಗೆಪ್ಪ ಗುಣದಾಳ, ಶಿವಲಿಂಗ ಪೋಳ, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ರಾಜೇಶ್ವರಿ ಮೇಲಪ್ಪಗೋಳ,ಕವಿತಾಮಡಿವಾಳಸೇರಿದಂತೆ ಹಲವರು ಇದ್ದರು.

# ದೃಢ ನಿರ್ಧಾರದಿಂದ ಮಾತ್ರ ಯಶಸ್ಸು ಸಾಧ್ಯ: ಮಹಾಂತೇಶ ಫನಸಲ್ಕರ



**ಮಹಾಲಿಂಗಪುರ :** ಯಾವುದೇ ಕೆಲಸವಿರಲಿ ಅದರಲ್ಲಿ ಯಶಸ್ಸು ಕಾಣಬೇಕಾದರೆ ದೃಢ ನಿರ್ಧಾರದ ಅಗತ್ಯವಿದೆ ಎಂದು ಕಿರಿಯ ತರಬೇತಿ ಅಧಿಕಾರಿ (ಆಯ್‌ಟಿಆಯ್) ಮಹಾಂತೇಶ ಫನಸಲ್ಕರ ಹೇಳಿದರು.

ಸಮೀಪದ ಕೆಸರಗೊಪ್ಪ ಸರ್ಕಾರಿ ಪ್ರೌಢ ಶಾಲೆ ಮೈದಾನದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಸಮಿತಿ ಸಹಯೋಗದಲ್ಲಿ ಆರಂಭಗೊಂಡ ಬಾಲಕ/ಕಿಯರ ಕ್ರಿಕೆಟ್ ತರಬೇತಿ ಶಿಬಿರದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಕೆಲಸದ ಆರಂಭಕ್ಕೂ ಮುನ್ನ ಗುರುವಿನ ಮಾರ್ಗದರ್ಶನದೊಂದಿಗೆ ವ್ಯಕ್ತಿಯು ಉನ್ನತ ಗುರಿ ಹೊಂದಿರಬೇಕು. ಶಿಬಿರದಲ್ಲಿ ನೀಡುತ್ತಿರುವ ತರಬೇತಿ ಪಡೆದು ಉತ್ತಮ ಕ್ರೀಡಾ ಭವಿಷ್ಯ ರೂಪಿಸಿಕೊಳ್ಳಿ ಎಂದರು.

ದೈಹಿಕ ಶಿಕ್ಷಕ ರಾಮಚಂದ್ರ ಮೇತ್ರಿ ಮತ್ತು ಕಾರ್ಯದರ್ಶಿ ಶ್ರೀಕಾಂತ್ ಮಾಗಿ ಮಾತನಾಡಿ ದುಬಾರಿಯ ಈ ದಿನಗಳಲ್ಲಿ ಪಟ್ಟಣಗಳಿಗೆ ಹೋಗಿ ತರಬೇತಿ ಪಡೆಯುವುದು ಬಡ ಹಾಗೂ ಮಧ್ಯಮ ವರ್ಗಗಳ ಜನರಿಗೆ ಕಷ್ಟ ಸಾಧ್ಯವಾಗಿದೆ.

ಅಂತಹ ಬಡ ಆಟಗಾರರಿಗೆ ಅನೂಕೂಲವಾಗಲಿ ಎಂಬ ಉದ್ದೇಶದಿಂದ ಸ್ಥಳೀಯ ಹಿರಿಯ ಆಟಗಾರರು ಕ್ರಿಕೆಟ್ ತರಬೇತಿ ಶಿಬಿರವನ್ನು ಹಮ್ಮಿಕೊಂಡಿದ್ದಾರೆ, ಆಸಕ್ತರು ಪಾಲ್ಗೊಂಡು ಶಿಬಿರವನ್ನು ಯಶಸ್ವಿಗೊಳಿಸಬೇಕೆಂದು ಕ್ರೀಡಾ ವಿದ್ಯಾರ್ಥಿಗಳಿಗೆ ಮನವಿ ಮಾಡಿದರು.

ಬಸವರಾಜ ರಾಯರ, ಎಸ್.ಡಿ.ಮಾಗಿ, ಎಸ್.ಎಂ.ಗುಜ್ಜರ್, ರವಿ ಬಿದರಿ, ಮಹಾದೇವ ಕಡಬಲ್ಲವರ,

ಸುರೇಶ್ ಬಿದರಿ, ಮಲ್ಲು ಪಾಶ್ಚಾಪೂರ, ಬಂದು ಪಕಾಲಿ, ಯಾಸೀನ್ ಪಾಂಡು, ಶಿವಯ್ಯ ಮಠಪತಿ, ಮಹಾಲಿಂಗಪ್ಪ ಮಾದರ, ರಾಮಚಂದ್ರ ಮೇತ್ರಿ, ಪ್ರಭು ಸಸಾಲಟ್ಟಿ ಹಾಗೂ ಶಿಬಿರಾರ್ಥಿಗಳು ಇದ್ದರು.

ಸದಾ ಕುರಿ ಸ್ವಾಗತಿಸಿ–ನಿರೂಪಿಸಿದರು. ರೇವಣ್ಣ ಇಟಕನ್ನವರ ವಂದಿಸಿದರು.

# ದೇಶ, ಸಂಸ್ಕೃತಿ ಮತ್ತು ನಮ್ಮ ಹಿಂದೂ ಸನಾತನ ಧರ್ಮವನ್ನು ಉಳಿಸುವ ಚುನಾವಣೆ



**ರಬಕವಿ–ಬನಹಟ್ಟಿ :** ಮುಂಬರುವ ಲೋಕಸಭಾ ಚುನಾವಣೆ ದೇಶ, ಸಂಸ್ಕೃತಿ ಮತ್ತು ನಮ್ಮ ಹಿಂದೂ ಸನಾತನ ಧರ್ಮವನ್ನು ಉಳಿಸುವ, ದೇಶದ ಭವಿಷ್ಯ ಉಜ್ವಲಗೊಳಿಸುವ ಚುನಾವಣೆಯಾಗಿದೆ. ಸಂವಿಧಾನದ ಮೂಲಕ ಈ ದೇಶದ ಎಲ್ಲ ಸಮುದಾಯದವರಿಗೆ ನ್ಯಾಯ ನೀಡಲು ನಾವು ಬಂದಿದ್ದೇವೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ಭಾನುವಾರ ರಬಕವಿಯ ಶಂಕರಲಿಂಗ ದೇವಸ್ಥಾನದ ಸರ್ಕಲ್ ದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ನೀಡುವ ಸಲುವಾಗಿ ಬೇರೆ ಒಂದೇ ಇಲಾಖೆಯ ರೂ. ಹನ್ನೊಂದು ಸಾವಿರ ಕೋಟಿ ಹಣವನ್ನು ಸರ್ಕಾರ ಬಳಕೆ ಮಾಡಿಕೊಂಡಿದೆ. ದೇಶದ ರೈತ, ನೇಕಾರ ಮತ್ತು ದಲಿತರ ಕುರಿತು ಕಾಂಗ್ರೆಸ್ ಸರ್ಕಾರ ಹಗುರವಾಗಿ ಮಾತನಾಡುತ್ತಿದೆ. ಬಿಜೆಪಿ ಸರ್ಕಾರದ ಇಪ್ಪತ್ತು ಜನಪರ ಯೋಜನೆಗಳನ್ನು ಕಾಂಗ್ರೆಸ್ ಸ್ಥಗಿತಗೊಳಿಸಿದೆ ಎಂದರು.

ಕಾಂಗ್ರೆಸ್ ಪಕ್ಷಕ್ಕೆ ಬಾಗಲಕೋಟೆ ಜಿಲ್ಲೆಯಲ್ಲಿ ಯೋಗ್ಯ ಅಭ್ಯರ್ಥಿ ದೊರೆಯಲಿಲ್ಲವೇ ? ಸಚಿವ ಶಿವಾನಂದ ಪಾಟೀಲರಿಗೆ ವಿಜಯಪುರದಲ್ಲಿ ಏನು ದೊರೆಯುವುದಿಲ್ಲ ಎಂದು ತಿಳಿದುಕೊಂಡು, ಮುಂದಿನ ದಿನಗಳಲ್ಲಿ ಇಲ್ಲಿಯ ಹಿರಿಯ ಕಾಂಗ್ರೆಸ್ಸಿಗರನ್ನು ಬದಿಗೆ ಸರಿಸಿ ತಂದೆ ಮತ್ತು ಮಗಳು ಕೂಡಿಕೊಂಡು ಬಾಗಲಕೋಟೆಯಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪನೆ ಮಾಡಲು ಬಂದಿದ್ದಾರೆ ಎಂದು ಪಾಟೀಲ ತಿಳಿಸಿದರು.

ಶಾಸಕ ಸಿದ್ದೂ ಸವದಿ ಮಾತನಾಡಿ, ಸುಳ್ಳುಗಳೇ ಕಾಂಗ್ರೆಸ್ ಪಕ್ಷದ ಗ್ಯಾರಂಟಿಯಾಗಿದೆ. ಸುಳ್ಳುಗಳನ್ನು ಹೇಳುತ್ತ ಮತದಾರರ ದಿಕ್ಕು ತಪ್ಪಿಸುತ್ತಿದ್ದಾರೆ. ಕೆ. ಎಚ್. ಡಿ. ಸಿ. ಯಲ್ಲಿ ರೂ.೧೯೬ ಕೋಟಿಯಷ್ಟು ಹಗರಣವಾಗಿದ್ದರೆ ಅದರ ಬಗ್ಗೆ ತನಿಖೆ ನಡೆಸಲಿ.

ಶಿವಾನಂದ ಪಾಟೀಲರೇ ಜವಳಿ ಸಚಿವರಾಗಿದ್ದು , ಆರು ತಿಂಗಳಿಂದ ಕೆ.ಎಚ್. ಡಿ. ಸಿ. ನೇಕಾರರಿಗೆ ನಿರಂತರ ಉದ್ಯೋಗ ದೊರೆಯುತ್ತಿಲ್ಲ. ಕಚ್ಚಾ ಸರಕು ಪೂರೈಕೆ ಮಾಡಲು ಸರ್ಕಾರ ಮತ್ತು ನಿಗಮ ವಿಫಲಗೊಂಡಿವೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಕೆ. ಎಚ್. ಡಿ. ಸಿ. ನಿಗಮವನ್ನು ಮುಚ್ಚುವ ಹುನ್ನಾರ ಸಜ್ಜಾಗಿದೆ ಎಂದು ಸವದಿ ತಿಳಿಸಿದರು.

ಗ್ಯಾರಂಟಿ ಯೋಜನೆಗಳಿಗೆ ಹಣ ನೀಡಲು ಸರ್ಕಾರ ಐವತ್ತು ವಸ್ತುಗಳ ಬೆಲೆಯನ್ನು ಹೆಚ್ಚಿಸಿದ್ದಾರೆ. ಬಡವರಿಗೆ ಅಗತ್ಯವಾಗಿದ್ದ ಬಾಂಡ್ ಪೇಪರ್ ಗಳ ಬೆಲೆಯನ್ನು ಹೆಚ್ಚಿಸಿ ಬಡವರಿಗೆ ಅನ್ಯಾಯ ಮಾಡಿದ್ದಾರೆ. ನೇಕಾರರ ಬಗ್ಗೆ ಸುಳ್ಳು ಹೇಳುತ್ತಿರುವ ಕಾಂಗ್ರೆಸ್ ಸರ್ಕಾರದ ಇಂದಿನ ಸಚಿವರು ಸರ್ಕಾರದಲ್ಲಿರುವ ದಾಖಲೆಗಳನ್ನು ಪರಿಶೀಲನೆ ಮಾಡಿ ಮಾತನಾಡಲಿ ಎಂದು ಶಾಸಕ ಸವದಿ ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀಶೈಲ ಬೀಳಗಿ, ಸುರೇಶ ಅಕ್ಕಿವಾಟ, ಧರೆಪ್ಪ ಉಳ್ಳಾಗಡ್ಡಿ , ಸಂಜಯ ತೆಗ್ಗಿ, ಶಿವಾನಂದ ಗಾಯಕವಾಡ, ಆನಂದ ಕಂಪು, ಶಂಕರ ಹುನ್ನೂರ, ಶಿವಾನಂದ ಕಾಗಿ, ಈರಣ್ಣ ಚಿಂಚಖಂಡಿ, ಅಶೋಕ ರಾವಳ, ಮಹಾದೇವ ಪಾಲಭಾಂವಿ, ಸವಿತಾ ಹೊಸೂರ, ಪವಿತ್ರಾ ತುಕ್ಕನ್ನವರ, ಗೌರಿ ಮಿಳ್ಳಿ , ಸುವರ್ಣಾ ಕೊಪ್ಪದ, ವೈಷ್ಣವಿ ಬಾಗೇವಾಡಿ, ಬಸವರಾಜ ತೆಗ್ಗಿ , ಜೆಡಿಎಸ್ ಮುಖಂಡ ಸುರೇಶ ಮಡಿವಾಳ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು



**ರಬಕವಿ-ಬನಹಟ್ಟಿ :** ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಪ್ರತಿಭಾವಂತ ವಿದ್ಯಾರ್ಥಿಗಳಿದ್ದು, ಇಂಥ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಜನತಾ ಶಿಕ್ಷಣ ಸಂಘದ ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ ತಿಳಿಸಿದರು.

ಇತ್ತೀಚೆಗೆ ಇಲ್ಲಿನ ಎಸ್. ಆರ್. ಎ. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ ಕುರಿತು ಅವರನ್ನು ಸನ್ಮಾನಿಸಿ ಮಾತನಾಡಿದರು.

ಪ್ರಾಚಾರ್ಯ ಬಿ. ಆರ್. ಗೊಡ್ಡಾಳೆ ಮಾತನಾಡಿ, ಎಸ್. ಆರ್. ಎ. ಕಾಲೇಜಿನ ವಿದ್ಯಾರ್ಥಿಗಳು ಪ್ರತಿವರ್ಷ ವಿಶೇಷ ಸಾಧನೆಯನ್ನು ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಪ್ರಯತ್ನದ ಜೊತೆಗೆ ಇಲ್ಲಿಯ ಉಪನ್ಯಾಸಕರ ಪರಿಶ್ರಮ ಕೂಡಾ ಮುಖ್ಯವಾಗಿದೆ ಎಂದರು.

ಸಂಘದ ಅಧ್ಯಕ್ಷ ಬಸವರಾಜ ಭದ್ರನವರ, ಉಪಾಧ್ಯಕ್ಷ ರಾಮಣ್ಣ ಭದ್ರನವರ, ಆಡಳಿತ ಮಂಡಳಿಯ ಸದಸ್ಯರು, ಉಪನ್ಯಾಸಕರಾದ ಕೆ. ಎಚ್. ಸಿನ್ನೂರ, ಬಿ. ನಾಗರಾಜ, ಎಸ್. ಎಂ. ಬಿರಾದಾರ, ಎಸ್. ಎಸ್. ಖಾನಾಪುರ, ಎಫ್. ಬಿ. ತಳವಾರ, ಎಸ್. ಕೆ. ನಡುವಿನಕೇರಿ, ಶಿಲ್ಪಾ ಅಗಡಿ ಹಾಗೂ ಮಾಧವಾನಂದ ಗುಟ್ಲಿ, ಶಂಕರ ಸೋರಗಾಂವಿ, ಚಿದಾನಂದ ಗಿರಿಸಾಗರ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಕನ್ನಡ ಜಾನಪದ ಪರಿಷತ್ತಿನ 9ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿದ ಸಾವಕಾರ

**ಬೀಳಗಿ :** ಜಾನಪದ ಕಲೆಗಳಲ್ಲಿ ಬಯಲಾಟಅತ್ಯಂತ ವೈವಿಧ್ಯದಿಂದಕೂಡಿದಗಂಡುಕಲೆ. ಇದರಲ್ಲಿ ಸಾಹಿತ್ಯ, ಸಂಗೀತ, ನೃತ್ಯಗಳು ಮುಪ್ಪರಿಗೊಂಡಿವೆ. ಬಯಲಾಟ ಪ್ರಾಚೀನ ಕಾಲದಿಂದಲೂಗ್ರಾಮೀಣಜನರಿಗೆ ಮನರಂಜನೆ ಒದಗಿಸಿಕೊಂಡು ಬರುತ್ತಿರುವ ಹವ್ಯಾಸಿ ಕಲೆಯಾಗಿದೆಎಂದುಕನ್ನಡಜಾನಪದ ಪರಿಷತ್‌ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಹೇಳಿದರು.

ತಾಲೂಕಿನ ಬೂದಿಹಾಳ (ಎಸ್.ಎ.) ಗ್ರಾಮದಲ್ಲಿಕನ್ನಡಜಾನಪದ ಪರಿಷತ್‌ತಾಲೂಕುಘಟಕ ಬೀಳಗಿ ಹಾಗೂ ಶ್ರೀ ಕರೆಸಿದ್ಧೇಶ್ವರ ದೈವ ಮಂಡಳಿ ಬೂದಿಹಾಳ (ಎಸ್.ಎ.)ಇವರ ಸಂಯುಕ್ತಆಶ್ರಯದಲ್ಲಿಜಾತ್ರಾ ಮಹೋತ್ಸವದ ಅಂಗವಾಗಿ ಕನ್ನಡಜಾನಪದ ಪರಿಷತ್ತಿನ 9ನೇ ಸಂಸ್ಥಾಪನಾ ದಿನಾಚರಣೆ ಮತ್ತು ಬಯಲಾಟ ಪ್ರದರ್ಶನವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ನಾಟಕಗಳು ಸುಂದರ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗುತ್ತವೆಎಂದು ಹೇಳಿದರು.



ಬುಡಕಟ್ಟು ಹಾಗೂ ನಾಡಿನಜಾನಪದ ಕಲೆ, ಸಂಸ್ಕೃತಿಯನ್ನು ಉಳಿಸಲು ಮತ್ತು ಎಲೆಮರೆಕಾಯಿಯಂತಿರುವ ಜಾನಪದ ಕಲಾವಿದರನ್ನು ಉಳಿಸಿ ಬೆಳೆಸಲು ಪರಿಷತ್ ಸ್ಥಾಪಿಸಿದ್ದು. ರಾಜ್ಯಾಧ್ಯಕ್ಷಡಾ. ಎಸ್. ಬಾಲಾಜಿಅವರ ನೇತೃತ್ವದಲ್ಲಿ 9 ವರ್ಷಗಳಲ್ಲಿ ನಾಡಿನಾದ್ಯಾಂತ ಸುಮಾರು 8 ಸಾವಿರ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಗೊಳಿಸಲಾಗಿದೆ ಎಂದು ಹೇಳಿದರು.

ಕನ್ನಡಜಾನಪದ ಪರಿಷತ್‌ತಾಲೂಕಾಧ್ಯಕ್ಷ ಬಸವರಾಜದಾವಣಗೆರೆಅಧ್ಯಕ್ಷತೆ ವಹಿಸಿ ಮಾತನಾಡಿ, ಜನಪದ ಸಾಹಿತ್ಯ, ಕಲೆಗೆ ಅಗಾಧವಾದ ಶಕ್ತಿ ಇದೆ.ಶಿಕ್ಷಣದ ಜೊತೆಗೆ ಮೂಲ ಕಸಬುಗಳನ್ನು ಒಕ್ಕಲುತನ, ಜನಪದ ಕಲೆ, ಜನಪದ ಸಾಹಿತ್ಯವನ್ನು ಮೈಗೂಡಿಸಿಕೊಂಡು ಉಳಿಸಬೇಕಾಗಿದೆ ಎಂದು ಹೇಳಿದರು.

ಮೊಬೈಲ್‌ನಲ್ಲಿ ಮುಳುಗೇಳುತ್ತಿರುವ ಮಕ್ಕಳಿಗೆ ಪಾಲಕರು ಒಳ್ಳೆಯ ಸಂಸ್ಕಾರಕೊಡಬೇಕು.ಜೊತೆಗೆಒಡಪು, ಗಾದೆ ಮಾತು ಹೇಳಿ ಕೊಡಬೇಕು. ಭಜನೆ, ಡೊಳ್ಳು, ಪಾರಿಜಾತ ಕಲೆಗೆ ಹೆಸರಾದಗ್ರಾಮದಲ್ಲಿಜಾನಪದ ಕಲೆಗಳನ್ನು ಪೋಷಿಸುತ್ತಿರುವುದು ಸಂತೋಷದ ಸಂಗತಿಎಂದು ಹೇಳಿದರು.

ಬಯಲಾಟಕಲಾವಿದ ಭರಮಪ್ಪ ಪೂಜಾರಿ ಮಾತನಾಡಿ, ಬಯಲಾಟಕಲೆಯ ಮಹತ್ವವನ್ನು ವಿವರಿಸಿದರು. ಜಾನಪದ ಆಶುಕವಿ ಸದಾಶಿವ ಆಗೋಜಿಜಾನಪದ ಹಾಡುಗಳನ್ನು ಹಾಡಿ ನೆರೆದಜನರ ಮನಸೂರೆಗೊಳ್ಳುವಲ್ಲಿ ಯಶಸ್ವಿಯಾದರು.

ಜಮಖಂಡಿತಾಲೂಕಿನ ಸಾವಳಗಿ ಗ್ರಾಮದ ಶ್ರೀ ಬ್ರಹ್ಮದೇವರ ನಾಟ್ಯ ಸಂಘದಕಲಾವಿದರಿಂದ 'ಹಠವಾದಿ ಬೀರಪ್ಪ, ಮಹಾಜ್ಞಾನಿ ಮಾಳಪ್ಪ' ಎನ್ನುವ ಬಯಲಾಟ ಪ್ರದರ್ಶನಗೊಂಡಿತು.

# ಸರ್ವರ್ ಸಮಸ್ಯೆ: ಆಸ್ತಿ ಕರ ಪಾವತಿಸಲು ವಿಳಂಬ



ಸರ್ವರ್ ಸಮಸ್ಯೆ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದಷ್ಟು ಬೇಗನೆ ಸಮಸ್ಯೆಗೆ ಪರಿಹಾರ ಕಂಡುಕೊಂಡು ಆಸ್ತಿ ಕರ ಪಾವತಿಸಲು ಅನುಕೂಲ ಮಾಡಿ ಕೊಡಲಾಗುವುದು.
◆ ಜಗದೀಶ ಈಟಿ, ಪೌರಾಯುಕ್ತರು ರಬಕವಿ ಬನಹಟ್ಟಿ ನಗರಸಭೆ

**ರಬಕವಿ-ಬನಹಟ್ಟಿ :** ಇಲ್ಲಿಯ ನಗರಸಭೆಯಲ್ಲಿ 2024-25 ನೇ ಸಾಲಿನ ಆಸ್ತಿ ಕರ ತುಂಬಲು ಸಾರ್ವಜನಿಕರು ಬರುತ್ತಿದ್ದು , ಶುಕ್ರವಾರದಿಂದ ಸರ್ವರ್ ಡೌನ್ ಸಮಸ್ಯೆಯಾಗಿದ್ದು, ಸಾರ್ವಜನಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಎಪ್ರಿಲ್ ತಿಂಗಳಲ್ಲಿ ಆಸ್ತಿ ಕರ ಪಾವತಿಸಿದರೆ ಶೇ. ಐದರಷ್ಟು ರಿಯಾಯ್ತಿ ದೊರೆಯಲಿದೆ. ಆದರೆ ಸರ್ವರ್ ಸಮಸ್ಯೆಯಿಂದಾಗಿ ಬಹಳಷ್ಟು ಜನರು ಆಸ್ತಿ ಕರ ತುಂಬದೇ ಪರದಾಡುತ್ತಿದ್ದಾರೆ.

ರಬಕವಿ, ಬನಹಟ್ಟಿ ರಾಮಪುರ ಮತ್ತು ಹೊಸೂರಿನ ಜನರು ದಿನನಿತ್ಯ ನಗರಸಭೆಗೆ ಕೆಂಡದಂಥ ಸುಡು ಬಿಸಿಲಿನಲ್ಲಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಿಸಿಲು ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ನೀಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ತೇರದಾಳ ಪೊಲೀಸ್ ಠಾಣೆಯಲ್ಲಿ ಅಂಬೇಡ್ಕರ್ ಜಯಂತಿ

**ತೇರದಾಳ :** ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಮಾದರಿ ಆಗಿರುವ ದೇಶದ ಸಂವಿಧಾನ ಬರೆದ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ಕಳಕಳಿ ಹಾಗೂ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ ಎಂದು ಇಲ್ಲಿನ ಪೊಲೀಸ್ ಠಾಣಾಧಿಕಾರಿ ಅಪ್ಪು ಐಗಳಿ ಹೇಳಿದರು.

ಪೊಲೀಸ್ ಠಾಣೆಯಲ್ಲಿ ಡಾ. ಅಂಬೇಡ್ಕರ್ ಜಯಂತಿ ನಿಮಿತ್ತ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.





ದೇಶದ ಪ್ರತಿಯೊಬ್ಬ ಪ್ರಜೆಗೆ ಸಮಾನತೆಯನ್ನು ನೀಡಿದ ಮಹಾನ್ ಚೇತನ ಡಾ. ಅಂಬೇಡ್ಕರ್. ಇಂದು ನಾವು ಸಮಾಜದಲ್ಲಿ ಏನೇ ಸ್ಥಾನ ಮಾನ ಪಡೆದಿದ್ದರು ಅದು ಅಂಡಬೇಡ್ಕರ್ ರಚಿಸಿದ ಸಂವಿಧಾನದಿಂದ ಎಂಬುದನ್ನು ಮರೆಯಬಾರದು ಎಂದು ಹೇಳಿದರು.

ಅಶೋಕ ಸವದಿ, ವಿವೇಕ ಸುವರ್ಣಖಂಡಿ, ಪಿ.ಎಚ್. ಗಣಿ, ಸುನೀಲ ಮದಮಲಟ್ಟಿ, ಸುಭಾಸ ಬೆವನೂರ, ರಮೇಶ ಬಿರಾದಾರ, ಮಾನೆ. ಇಮ್ಮಡಿ, ಸವದಿ ಮತ್ತಿತರಿದ್ದರು.

## ತೇರದಾಳದಲ್ಲಿ ಬಿಜೆಪಿ ಕಾರ್ಯಕರ್ತಸಭೆ

# ಮೋದಿ ಪಿಎಂ ಮಾಡುವದೊಂದೆ ಗುರಿ ಇರಲಿ: ಸವದಿ

**ತೇರದಾಳ :** ನಾಲ್ಕೈದು ದಶಕಗಳ ಕಾಲ ದೇಶವನ್ನು ಆಳಿದ ಕಾಂಗ್ರೆಸ್ ಪಕ್ಷ ದೇಶದ ಸಂಪತ್ತನ್ನು ಲೂಟಿ ಮಾಡುವ ಕೆಲಸ ಮಾಡಿದೆ ಹೊರತು ಅಭಿವೃದ್ಧಿ ಏನೂ ಮಾಡಲಿಲ್ಲ. ನರೇಂದ್ರ ಮೋದಿ ಪ್ರಧಾನ ಮಂತ್ರಿ ಆದ ಬಳಿಕ ಭಾರತ ದೇಶವನ್ನು ಇಡೀ ಜಗತ್ತು ನೋಡುವಂತೆ ಮಾಡಿದ್ದಾರೆಂದು ಶಾಸಕ ಸಿದ್ದು ಸವದಿ ಹೇಳಿದರು.

ಇಲ್ಲಿನ ಪೇಠೆ ಭಾಗದ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಈ ಬಾರಿಯೂ ಮೋದಿ ಅವರನ್ನು ಪಿಎಂ ಮಾಡುವದೊಂದೆ ಗುರಿ ಇಟ್ಟುಕೊಂಡು ಲೋಕಸಭೆ ಬಿಜೆಪಿ ಅಭ್ಯರ್ಥಿ ಪಿ.ಸಿ. ಗದ್ದಿಗೌಡರ ಅವರನ್ನು ಗೆಲ್ಲಿಸುವ ಸಂಘಟಿತ ಹೋರಾಟ ನಡೆಸೋಣ ಎಂದು ಹೇಳಿದ ಶಾಸಕ ಸವದಿ, ಗ್ಯಾರಂಟಿ ಯೋಜನೆಗಳ ಮೇಲೆ ಕಾಂಗ್ರೆಸ್ ಲೋಕಸಭೆ ಚುನಾವಣೆ ನಡೆಸುತ್ತಿದೆ. ಆದರೆ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಹಣಕಾಸಿನ ಸ್ಥಿತಿ ದಿವಾಳಿ ಆಗಿದೆ. ಮೋದಿ ನೇತೃತ್ವದ ಕೇಂದ್ರ ಸರಕಾರದ ಯೋಜನೆಗಳನ್ನು ಜನರಿಗೆ ತಿಳಿಸಿ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು. ಪಕ್ಷದ ಗ್ರಾಮೀಣ ಅಧ್ಯಕ್ಷ ಸುರೇಶ ಅಕ್ಕಿವಾಟ, ನಗರ ಘಟಕ ಅಧ್ಯಕ್ಷ ಮಹಾವೀರ ಕೊಕಟನೂರ, ಪ್ರಭಾಕರ ಬಾಗಿ, ನಿಂಗಪ್ಪಣ್ಣ ಮಾಲಗಾಂವಿ, ಬಸಪ್ಪ ಮುಕರಿ, ಶ್ರೀಶೈಲ ಮೋದಿ, ಶಂಕರ ಹುನ್ನೂರ ಮತ್ತಿತರಿದ್ದರು.



# ಬೆಳಗಲಿ ಕೆಪಿಸಿಸಿ ಅಧ್ಯಕ್ಷರ ಸಮ್ಮುಖದಲ್ಲಿ ಮರುಸೇರ್ಪಡೆ

**ಜಮಖಂಡಿ :** ಕೆಪಿಸಿಸಿ ಅಧ್ಯಕ್ಷರ ಬುಲಾವ್ ಮೇರೆಗೆ ಬೆಳಗಾವಿಗೆ ತೆರಳಿದ್ದ ಉಚ್ಚಾಟಿತ ಕಾಂಗ್ರೆಸ್ ಮುಖಂಡ, ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷ ಸುಶೀಲಕುಮಾರ ಬೆಳಗಲಿ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಅವರಿಗೆ ಭೇಟಿಯಾಗಿ ಕೆಲವೊಂದಿಷ್ಟು ಮಾತುಕತೆ ನಂತರ ಕಾಂಗ್ರೆಸ್ ಪಕ್ಷಕ್ಕೆ ಮರುಸೇರ್ಪಡೆ ಮಾಡಿಕೊಂಡರು.

ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡಿರುವ ಸುಶೀಲಕುಮಾರ ಬೆಳಗಲಿ ಪತ್ರಿಕೆಯೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಮರು ಸೇರ್ಪಡೆಗೊಂಡಿರುವ ಹಿನ್ನಲೆಯಲ್ಲಿ ಎಪ್ರೀಲ್ 16 ರಂದು ಸಂಜೆ 4 ಗಂಟೆಗೆ ಸಾವಳಗಿಯ





ಬೆಳಗಲಿ ತೋಟದಲ್ಲಿ ಅಭಿಮಾನಿಗಳ, ಕಾರ್ಯಕರ್ತರ ಸಭೆ ಕರೆಯಲಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಬಾಗಲಕೋಟ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ರಾಹುಲ ಕಲೂತಿ ಸಹಿತ ಹಲವರು ಕಾಂಗ್ರೆಸ್ ಮುಖಂಡರು ಇದ್ದರು.

# ಮಹಾದೇವಪ್ಪ ಬುರ್ಲಿ ನಿಧನ



**ರಬಕವಿ-ಬನಹಟ್ಟಿ :** ಹೊಸೂರ ಗ್ರಾಮದ ಮಹಾದೇವಪ್ಪ ಬುರ್ಲಿ ತಮ್ಮ 70 ನೆಯ ವಯಸ್ಸಿನಲ್ಲಿ ರಬಕವಿಯ ಆಶ್ರಯ ಕಾಲೋನಿಯಲ್ಲಿ ಎಪ್ರೀಲ್ 14 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಓರ್ವ ಪುತ್ರಿ, ಐದು ಜನ ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಸರಕಾರಿ ಕಾಲೇಜಿನಲ್ಲಿ ಡಾ. ಅಂಬೇಡ್ಕರ ಜಯಂತಿ ಆಚರಣೆ



**ಜಮಖಂಡಿ :** ತಾಲೂಕಿನ ಹುನ್ನೂರ ಗ್ರಾಮದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಡಾ.ಬಿ.ಆರ್. ಅಂಬೇಡ್ಕರರ 133ನೇ ಜಯಂತಿ ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ.ಕಾಳಿಂಗ ಗೋಳಸಂಗಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ವಿಭಾಗದ ಕಾರ್ಯದರ್ಶಿ ಶಂಕರ ಅರಬಳ್ಳಿ, ಐ.ಕ್ಯೂ.ಎ.ಸಿ ಸಂಚಾಲಕ ಡಾ. ಎನ್.ವಿ.ಅಸ್ಕಿ, ಕ್ರೀಡಾಕಾರ್ಯದರ್ಶಿ ಎಲ್.ಎಸ್.ಕೋರೆ, ಎನ್.ಎಸ್.ಎಸ್ ಅಧಿಕಾರಿ ಡಾ.ಜಯಪ್ರಕಾಶ, ಗ್ರಂಥಪಾಲಕಿ ಸುಕನ್ಯಾ ದೊಡಮನಿ, ಎ.ಎಲ್.ಕಡಕೋಳ, ಗೋಪಾಲ ಪೂಜಾರಿ, ಎಸ್.ಎಸ್.ಸುವರ್ಣಖಿಂಡಿ, ಕಲಾವತಿ ಪೂತಿ, ಎಸ್.ಎಂ.ಆನಿ, ಅಕ್ಷಯ. ಕಮತಗಿ, ಎಚ್. ಎಲ್.ತುಂಗಳ ಸಹಿತ ಹಲವರು ಇದ್ದರು.

# ಹುನ್ನೂರಲ್ಲಿ ಭಕ್ತರಿಂದ ಅಂಬಾಭವಾನಿ ಅದ್ಧೂರಿ ರಥೋತ್ಸವ



**ಜಮಖಂಡಿ :** ತಾಲೂಕಿನ ಹುನ್ನೂರು ಗ್ರಾಮದಲ್ಲಿ ಸಾವಿರಾರು ಭಕ್ತರಿಂದ ಅದ್ದೂರಿಯಾಗಿ ಶ್ರೀದೇವಿ ಅಂಬಾಭವಾನಿ ರಥೋತ್ಸವ ಸಂಭ್ರಮದಿಂದ ನಡೆಯಿತು.

ಪ್ರಸಕ್ತ ವರ್ಷದಿಂದ ಹೊಸ ರಥದಲ್ಲಿ ಶ್ರೀದೇವಿ ಮೂರ್ತಿ ಉತ್ಸವ ನಡೆಸುವ ಸಂಪ್ರದಾಯಕ್ಕೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿ ಚಾಲನೆ ನೀಡಲಾಯಿತು. ಗ್ರಾಮದ ದೇವಸ್ಥಾನದಿಂದ ಚಾವಡಿಗೆ ತಲುಪಿ ಅಲ್ಲಿಂದ ಬಸ್ ನಿಲ್ದಾಣ ಬಳಿವಿರುವ ಬಸವೇಶ್ವರ ವೃತ್ತದವರೆಗೆ ರಥ ಎಳೆದು ಭಕ್ತರು ಸಂಭ್ರಮಿಸಿದರು. ಜೈ ಭವಾನಿ, ಜೈ ಶಿವಾಜಿ ಘೋಷಣೆಗಳು ಮೊಳಗಿದವು. ಕರಡಿ ಮಜಲು, ಹಲಗೆಮೇಳ ಸಹಿತ ವಿವಿಧ ಮಂಗಳ ವಾದ್ಯಗಳ ನಿನಾದ, ಕುದುರೆ ಸೋಗು, ಗೊಂಬೆ ಕುಣಿತ, ನಂದಿಕೋಲುಗಳ ಜತೆ ಸಾಗಿದ ರಥೋತ್ಸವವನ್ನು ಅಕ್ಕಪಕ್ಕ ಭಕ್ತರು ನಿಂತು ಕಣ್ತುಂಬಿಕೊಂಡರು. ವಿವಿಧ ಚಿತ್ತಾರ ಸೃಷ್ಟಿಸಿದ ಮದ್ದು ಸುಡುವ ಕಾರ್ಯ ನೋಡುಗರ ಮನರಂಜಿಸಿತು.

# ದಾಖಲೆಯೊಂದಿಗೆ ತುಂಗಳ ಕಾಲೇಜ ಅತ್ಯುತ್ತಮ ಫಲಿತಾಂಶ



**ಜಮಖಂಡಿ :** ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ತುಂಗಳ ವಿಜ್ಞಾನ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದು, ಶೇಕಡಾ 99.41ರಷ್ಟು ಫಲಿತಾಂಶ ಪಡೆದುಕೊಂಡಿದೆ. 61 ವಿದ್ಯಾರ್ಥಿಗಳು ಶೇ.95ಕ್ಕಿಂತ ಅಧಿಕ, 315 ವಿದ್ಯಾರ್ಥಿಗಳು ಶೇ.90ಕ್ಕಿಂತ ಅಧಿಕ, 489 ವಿದ್ಯಾರ್ಥಿಗಳು ಶೇ.85 ಕ್ಕಿಂತ ಅಧಿಕ ಹಾಗೂ 188 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಗಣಿತ ವಿಷಯದಲ್ಲಿ 55 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದು ದಾಖಲೆ ನಿರ್ಮಿಸಿದ್ದಾರೆ. ಜೀವಶಾಸ್ತ್ರ ವಿಷಯದಲ್ಲಿ 30, ಕನ್ನಡ ಭಾಷೆಯಲ್ಲಿ 28, ರಸಾಯನಶಾಸ್ತ್ರ ವಿಷಯದಲ್ಲಿ 7, ಭೌತಶಾಸ್ತ್ರ, ಗಣಕವಿಜ್ಞಾನ ಮತ್ತು ಸಂಸ್ಕೃತ ವಿಷಯದಲ್ಲಿ ತಲಾ ಒಬ್ಬ ವಿದ್ಯಾರ್ಥಿ ನೂರಕ್ಕೆ ನೂರು ಅಂಕ ಪಡೆದುಕೊಂಡಿದ್ದಾರೆ.

ನಂದನ ಮಲ್ಲಾಪೂರ 600ಕ್ಕೆ 590 ಅಂಕಗಳಿಸಿ ರಾಜ್ಯಕ್ಕೆ 9ನೇ ರ‍್ಯಾಂಕ್, ಜಿಲ್ಲೆಗೆ 2ನೇ ರ‍್ಯಾಂಕ್ ಮತ್ತು ಕಾಲೇಜಿಗೆ ಪ್ರಥಮಸ್ಥಾನ ಪಡೆದಿರುತ್ತಾನೆ. ಹನುಮಂತ ನಾಯಿಕ 588 ಅಂಕ, ಭಾವನಾ ನಾಯಿಕ, ಪ್ರೀತಿ ಗೋಳಸಂಗಿ 586, ಭಾವನಾ ನಾಯಿಕ 586, ಆಕಾಶ ಹೂಗಾರ 585, ಲಲಿತಾ ಚನ್ನಾಳ 585, ಬಸವರಾಜ ಪಾಟೀಲ 584, ರಾಜೇಶ್ವರಿ ಮಠ 584, ಸಿದ್ಧಾರೂಢ ದಳವಾಯಿ 584, ದ್ರಾಕ್ಷಾಯಿಣಿ ಸೀತಿಮನಿ 583, ದರ್ಶನ ಶಿರನಾಳ 582, ದ್ರೋಣ ಕಾಂಬಳಿ 582, ಸಾನಿಕಾ ಪಾಟೀಲ 582, ಸೃಷ್ಟಿ ಬಿರಾದಾರ 582, ಸೌಜನ್ಯಾ ತುಪ್ಪದ 581, ಆದಿತ್ಯ ಪರಾಂಡೆ 580, ಸಂಗಮೇಶ ಹವಣ್ಣವರ 580, ಸುಧನ್ವ ಥೀಟೆ 580, ತೇಜಸ ಗೋವಿಂದಪುರಮಠ 579 ಅಂಕ ಪಡೆದುಕೊಂಡಿದ್ದಾರೆ.

ಸಾಧನೆಗೈದ ವಿದ್ಯಾರ್ಥಿಗಳಿಗೆ ಸಂಸ್ಥೆ ಸಂಸ್ಥಾಪಕ ಅಶೋಕ ತುಂಗಳ, ಡಾ.ಲಕ್ಷ್ಮೀ ತುಂಗಳ, ಪ್ರಾಚಾರ್ಯರಾದ ಆರ್.ಜಿ. ಜಹಾಗೀರದಾರ, ವಿಜಯ ಕುಲಕರ್ಣಿ ಸಹಿತ ಶಿಕ್ಷಕ ವೃಂದವರು ಅಭಿನಂದಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State